ಸಂಪುಟ : 8 ಸಂಚಿಕೆ : 180 ಪುಟ : 4 ಬೆಲೆ : 3.00 ರವಿವಾರ ಆಗಸ್ಟ್ 20, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 180 Pages : 4 Price : 3.00 Sunday August 20, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಸ್ವಾಭಿಮಾನದ ಬದುಕಿಗೆ ಸಹಕಾರಿಯಾಗಲಿವೆ ಸುಧಾರಿತ ತಳ್ಳುವ ಗಾಡಿಗಳು/ರಾಜ್ಯದಲ್ಲಿಯೇ ಪ್ರಥಮವಾಗಿ ಅನುಷ್ಠಾನಗೊಳಿಸಿದ ಗದಗ ಜಿಲ್ಲೆ

# ಬೀದಿ ಬದಿ ವ್ಯಾಪಾರಿಗಳಿಗೆ ಈಗ ಹೈಟೆಕ್ ಟಚ್!



**■ ವಿಜಯಸಾಕ್ಷಿ ಸುದ್ದಿ, ಗದಗ**

ವಿಶ್ವಗುರು ಬಸವಣ್ಣನವರ 'ಕಾಯಕವೇ ಕೈಲಾಸ' ತತ್ವದಡಿ ಸಮಾಜದಲ್ಲಿ ಪ್ರಾಮಾಣಿಕವಾಗಿ ಪ್ರತಿನಿತ್ಯ ಕಾರ್ಯನಿರ್ವಹಿಸುವ ಬೀದಿಬದಿ ವ್ಯಾಪಾರಸ್ಥರ ಬದುಕು ಕೂಡ ಮೇಲ್ದರ್ಜೆಗೇರಬೇಕು. ಅವರೂ ಕೂಡ ಎಲ್ಲರಂತೆ ಸ್ವಾಭಿಮಾನದ, ಸುಧಾರಿತ ಬದುಕನ್ನು ನಡೆಸುವಂತಾಗಬೇಕು ಎಂಬ ಆಶಯದೊಂದಿಗೆ, ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರು ಬೀದಿಬದಿ ವ್ಯಾಪಾರಸ್ಥರಿಗೆ ಉಡುಗರೆಯಾಗಿ ಹೈಟೆಕ್ ತಳ್ಳುಗಾಡಿಗಳನ್ನು ನೀಡಿದ್ದಾರೆ.

ನಗರದ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತವು ಆಗಸ್ಟ್ 15ರಂದು ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ದಿನಾಚರಣೆಯ ದಿನ ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರು ಜಿಲ್ಲಾಡಳಿತದ ವತಿಯಿಂದ ಗದಗ–ಬೆಟಗೇರಿ ಅವಳಿ ನಗರದ 50 ಫಲಾನುಭವಿಗಳಿಗೆ ಕಾಯಿಪಲ್ಲೆ ಮಾರಾಟಕಟ್ಟೆ ಹಾಗೂ ಹಣ್ಣು, ತರಕಾರಿ ವ್ಯಾಪಾರಿಗಳಿಗೆ ಬೀದಿಗಳಿಗೆ ತೆರಳಿ ಸುಗಮವಾಗಿ ವ್ಯಾಪಾರ ನಡೆಸುವ ಅನುಕೂಲಕ್ಕಾಗಿ ಹೈಟೆಕ್ ತಳ್ಳುವ ಗಾಡಿಗಳನ್ನು ಸಾಂಕೇತಿಕವಾಗಿ ವಿತರಿಸಿದರು.

**ಹೈಟೆಕ್ ತಳ್ಳುಗಾಡಿ:** ಬೀದಿಬದಿ ವ್ಯಾಪಾರಸ್ಥರ ಬದುಕು ಬಂಗಾರವಾಗಬೇಕು. ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ನಿಟ್ಟಿನಲ್ಲಿ ಬೀದಿಗಳಿಗೆ ಸಂಚರಿಸಿ ವ್ಯಾಪಾರ ಮಾಡಲು ಹೈಟೆಕ್ ತಳ್ಳುಗಾಡಿಗಳನ್ನು ತಯಾರಿಸಿ ನೀಡಲಾಗಿದೆ. ಇದರಲ್ಲಿ ಬೆಳಕಿನ ವ್ಯವಸ್ಥೆಗೆ ಲೈಟ್ ಹಾಗೂ ಧ್ವನಿವರ್ಧಕ ಅಳವಡಿಸಲಾಗಿದೆ. ವ್ಯಾಪಾರದ ನಂತರ ತರಕಾರಿ ಹಾಗೂ ಹಣ್ಣುಗಳನ್ನು ಭದ್ರವಾಗಿ ಶೇಖರಿಸಲು ತಳ್ಳುಗಾಡಿಗಳ ಕೆಳಭಾಗದಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಅದರಂತೆ ತರಕಾರಿ ಕಟ್ಟೆಗಳಲ್ಲಿ ತರಕಾರಿ ಹಾಗೂ ಹಣ್ಣುಗಳನ್ನು ಪ್ರತ್ಯೇಕವಾಗಿ ಇರಿಸಲು ಮೆಟ್ಟಿಲುಗಳ ರೀತಿಯಲ್ಲಿ ತಯಾರಿಸಲಾಗಿದ್ದು, ಇದರಿಂದ ವ್ಯಾಪರಸ್ಥರಿಗೆ ಹಾಗೂ ಖರೀದಿದಾರರಿಗೆ ಹೆಚ್ಚಿನ ಅನುಕೂಲವಾಗಲಿದೆ.

**ಸ್ವಾಭಿಮಾನದ ಬದುಕಿಗೆ ಸಹಕಾರಿ:** ಬೀದಿ ಬದಿ ವ್ಯಾಪಾರಸ್ಥರು ಎಲ್ಲೆಂದರಲ್ಲಿ ಕುಳಿತು ವ್ಯಾಪಾರ ಮಾಡುವದನ್ನು ಮನಗಂಡ ಸಚಿವರು, ಎಚ್.ಕೆ ಪಾಟೀಲರು, ವಿಶೇಷ ಮುತುವರ್ಜಿ ವಹಿಸಿ ಗುಣಮಟ್ಟದ ಕಾಯಿಪಲ್ಲೆ ಮಾರಾಟ ಕಟ್ಟೆ ಹಾಗೂ ತಳ್ಳುಗಾಡಿಗಳನ್ನು ತಯಾರಿಸುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಜಿಲ್ಲಾಡಳಿತದಿಂದ ಸುಸಜ್ಜಿತ ತಳ್ಳುಗಾಡಿ ಹಾಗೂ ಕಾಯಿಪಲ್ಲೆ ಮಾರಾಟ ಕಟ್ಟೆಗಳನ್ನು ತಯಾರಿಸಿ ನೀಡುವ ಮೂಲಕ, ಬೀದಿಬದಿ ವ್ಯಾಪಾರಸ್ಥರ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ನೆರವಾದವರು ಎಚ್.ಕೆ ಪಾಟೀಲರು.

ಈ ವಿಶೇಷ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ, ಜಿಲ್ಲಾಧಿಕಾರಿಗಳಾದ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗಂಗಾಧರ ಶಿರೋಳ, ಗಣ್ಯರು, ಫಲಾನುಭವಿಗಳು ಸಾಕ್ಷಿಯಾದರು.



ಪ್ರತಿದಿನ ಬೀದಿ–ಬೀದಿ ಸುತ್ತುತ್ತಾ, ಕೂಗಿ ಹಣ್ಣು ಹಾಗೂ ತರಕಾರಿಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಹೈಟೆಕ್ ತಳ್ಳುಗಾಡಿಯಿಂದಾಗಿ ದಿನದಿಂದ ದಿನಕ್ಕೆ ವ್ಯಾಪಾರ ವೃದ್ಧಿಯಾಗುತ್ತಿದೆ. ಜೊತೆಗೆ ವ್ಯವಸ್ಥಿತ ಮಾರಾಟಕ್ಕೆ ಅನುಕೂಲ ಕಲ್ಪಿಸಿದ ಎಚ್.ಕೆ ಪಾಟೀಲ ಸಾಹೇಬರಿಗೆ ಕೃತಜ್ಞತೆ ಸಲ್ಲಿಸುವದಾಗಿ ವ್ಯಾಪಾರಿಗಳಾದ ರಶೀದಾ ನದಾಫ್ ಹಾಗೂ ವಿನೋದ ಹಂಗರಗಿ ಮನತುಂಬಿ ನುಡಿದರು.

ಬೀದಿಬದಿ ವ್ಯಾಪಾರಸ್ಥರ ನಿಯಂತ್ರಣ ಕಾಯ್ದೆಯನ್ನು 2014ರಲ್ಲಿ ಕೇಂದ್ರದ ಯುಪಿಎ ನೇತೃತ್ವದ ಸರ್ಕಾರ ರಚಿಸಿತು. 2016ರಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಈ ಕಾಯ್ದೆ ಜಾರಿಗಾಗಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಿತು. ಇದರಿಂದ ಸರ್ಕಾರ ಪಟ್ಟಣ ಮಾರಾಟ ಸಮಿತಿ ರಚಿಸಲು ಸೂಚನೆ ನೀಡಿದ್ದರ ಫಲವಾಗಿ, 2019ರಲ್ಲಿ ಸಮಿತಿಗಳು ರಚನೆಯಾದವು. ಬೀದಿಬದಿ ವ್ಯಾಪಾರಸ್ಥರ ಬದುಕು ಕೂಡ ಗುಣಮಟ್ಟದಿಂದ ಕೂಡಿರಬೇಕು. ಅವರು ಸಹ ಎಲ್ಲರಂತೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬೇಕು ಎಂಬ ಉದ್ದೇಶದೊಂದಿಗೆ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ ಪಾಟೀಲರು ಬೀದಿಬದಿ ವ್ಯಾಪಾರಿಗಳ ಅನುಕೂಲಕ್ಕಾಗಿ ಸಾಂಕೇತಿಕವಾಗಿ 50 ಫಲಾನುಭವಿಗಳಿಗೆ ತರಕಾರಿ ಕಟ್ಟೆ ಹಾಗೂ ಹೈಟೆಕ್ ತಳ್ಳುಗಾಡಿಗಳನ್ನು ವಿತರಿಸಿರುವದು ಸಂತಸ ತಂದಿದೆ.

**– ಬಾಷಾಸಾಬ ಮಲ್ಲಸಮುದ್ರ.**
ಕರ್ನಾಟಕ ರಾಜ್ಯ ರಸ್ತೆ ಬದಿ ವ್ಯಾಪಾರಿಗಳ ಮಹಾಮಂಡಳದ ರಾಜ್ಯ ಉಪಾಧ್ಯಕ್ಷ.

## ಗದಗ ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಆಗಸ್ಟ್ 20 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ವಾರ್ಡ್ ನಂ. 29 ಮಸೂತಿ ಲೈನ್, ಮೇಲಿನ ಭಾಗ, ಕೆಳಗಿನ ಭಾಗ ವಾರ್ಡ್ ನಂ. 1ರಲ್ಲಿ ಎಸ್.ಎಮ್.ಕೃಷ್ಣಾ ನಗರ, ಕೆಳಗಿನ ಭಾಗ, ಮೇಲಿನ ಭಾಗ, ವಾರ್ಡ್ ನಂ. 15, 16, 17 ಶಹಪೂರ ಪೇಟೆ, ಡಿ.ಸಿ.ಮಿಲ್ ರೋಡ್, ಜವಳಗಲ್ಲಿ, ಬಸವೇಶ್ವರ ರೋಡ್, ಗಣೇಶ ಗುಡಿ, ಪ್ರಕಾಶ ಸ್ಟೋರ್ ನಂದಿ, ತಡಸದವರ ಲೈನ್, ಗಡಾದವರ ಲೈನ್, ಕಾಡಪ್ಪನವರ ಲೈನ್, ಕಟ್ಟಿಬಸವೇಶ್ವರ ಲೈನ್, ವಿಜಾಪೂರ ಓಣಿ, ನಾಗಪ್ಪನ ಕಟ್ಟಿ, ಶುದ್ಧ ನೀರಿನ ಘಟಕದ ಮುಂದೆ, ಹಿಂದೆ, 4ನಂ. ಶಾಲೆಯ ಹಿಂದಿನ ಭಾಗ ಶೌಚಾಲಯದ ಹಿಂದಿನ ಭಾಗ, ಕರ್ನಾಟಕ ಟಾಕೀಸ್ ಲೈನ್, ಪರಪ್ಪರ ಲೈನ್, ವಾರ್ಡ್ ನಂ. 05 ರಲ್ಲಿ ನರಸಾಪೂರ ಆಶ್ರಯ ಕಾಲೋನಿಯ ಮಲ್ಲಿಕಾರ್ಜುನ ಲೈನ್, ಪವಾರವರ ಲೈನ್, ಕಾರ್ತಿಕವರ ಲೈನ್, ಚಹಾದ ಅಂಗಡಿ ಲೈನ್, ಮಾಬುಸುಬಾನಿ ಕಟ್ಟಿ ಲೈನ್, ಪೆಂಡರ್ ಓಣಿ , ನಂದರಗಿಯವರ ಲೈನ್, ಜತ್ತಿಯವರ ಲೈನ್, ಬಚ್ಚಲಕ್ಕಮ್ಮನ ಗುಡಿ ಹುಚ್ಚನಗೌಡ್ರ ಓಣಿ, ಚೆನ್ನೆಗೌಡ್ರ ಓಣಿ. ವಾರ್ಡ್ ನಂ. 35ರಲ್ಲಿ ಅಕ್ಕಿ ಡಾ॥ ಲೈನ್, ಗಡಗಿಯವರ ಲೈನ್, ಹೂಲಿಯವರ ಲೈನ್, ನೀಲಮ್ಮತಾಯಿ ಮಠದ ಗಾರ್ಡನ್ ಲೈನ್, ವಾರ್ಡ್ ನಂ. 20ರಲ್ಲಿ ವಿಭೂತಿ ಓಣಿ ಬೇವಿನಮರದಮ್ಮನ ಗುಡಿ ಲೈನ್, ಎಸ್.ಟಿ.ಡಿ. ಭಾಗ–1, ಭಾಗ–2, ಖಾನತೋಟ ಭಾಗ–1, ಭಾಗ–2, ಹುಲಿಗೆಮ್ಮನ ಗುಡಿ ಲೈನ್, ವಾರ್ಡ್ ನಂ. 19ರಲ್ಲಿ ಸಿಟಿ ಹಾಲ್ ಭಾಗ–1, ಭಾಗ–2 ವಾರ್ಡ್ ನಂ. 23 ರಲ್ಲಿ ಜಂತ್ಲಿಯವರ ಲೈನ್, ವಾರ್ಡ್ ನಂ. 21 ರಲ್ಲಿ ಪಡಗದವರ ಲೈನ್, ಭಾಗ–1, ಭಾಗ2.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತಹಸೀಲ್ದಾರರೆದುರು ಪ ಪಂ ಮುಖ್ಯಾಧಿಕಾರಿಕಾರಿಗಳ ಬಗ್ಗೆ ಸದಸ್ಯರ ದೂರು

# ಕಾಮಗಾರಿಗಳ ಕುರಿತು ಸದಸ್ಯರಿಗೇ ಮಾಹಿತಿಯಿಲ್ಲ!

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ನಮ್ಮ ಪಟ್ಟಣ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಇಲ್ಲ. ಆದರೆ ನಾವು 17 ಜನ ಸದಸ್ಯರಿದ್ದೇವೆ. ನಮಗಾರಿಗೂ ಮಾಹಿತಿ ನೀಡದೆ, ತಮ್ಮ ಮನಸ್ಸಿಗೆ ಬಂದಂತೆ ಅಧಿಕಾರ ನಡೆಸುತ್ತಿರುವ ಮುಖ್ಯಾಧಿಕಾರಿ ಶಿವಾನಂದ ಅಜ್ಜಣ್ಣವರ ನಮ್ಮನ್ನು ತೀವ್ರವಾಗಿ ಕಡೆಗಣಿಸುತ್ತಿದ್ದಾರೆ ಎಂದು ನರೇಗಲ್ಲ ಪಟ್ಟಣ ಪಂಚಾಯತಿಯ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಪಕ್ಷಭೇದ ಮರೆತು ಪ ಪಂ ಆಡಳಿತಾಧಿಕಾರಿ, ತಹಸೀಲ್ದಾರ ಕಿರಣಕುಮಾರ ಕುಲಕರ್ಣಿಯವರ ಮುಂದೆ ಮುಖ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆದಿದೆ.

ಸಾರ್ವಜನಿಕ ಸಭೆಯನ್ನು ಮುಗಿಸಿ ಅಧ್ಯಕ್ಷರ ಕೋಣೆಯಲ್ಲಿ ಕುಳಿತಿದ್ದ ಪ ಪಂ ಸದಸ್ಯರೆಲ್ಲರನ್ನು ತಹಸೀಲ್ದಾರರು ಭೇಟಿಯಾಗಲು ಬಂದಾಗ, ಪಟ್ಟಣ ಪಂಚಾಯಿತಿಯಲ್ಲಿ ಇಂದು ಸಾರ್ವಜನಿಕ ಸಭೆ ಇದೆಯೆಂಬುದನ್ನು ಯಾರಿಂದಲೋ ಕೇಳಿ ತಿಳಿದುಕೊಂಡು ಬಂದಿದ್ದ ಸದಸ್ಯರೆಲ್ಲರೂ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತಿದ್ದರು. ಕಚೇರಿಗೆ ಬಂದ ತಮ್ಮನ್ನು ಗಮನಿಸದೆ, ಸಾರ್ವಜನಿಕ ಸಭೆಗೂ ಆಹ್ವಾನಿಸದೆ ಮುಖ್ಯಾಧಿಕಾರಿಗಳು ತಮನ್ನು ಅವಮಾನಿಸಿದ್ದಾರೆ. ತಾವು ಬಂದು ಕರೆಯದೆ, ಯಾರಿಂದಲೋ ಹೇಳಿ ಕಳಿಸುವ ಮೂಲಕ ತಮ್ಮ ದಾರ್ಷ್ಟ್ಯವನ್ನು ಮೆರೆದಿದ್ದಾರೆ ಎಂದು ಸದಸ್ಯರೆಲ್ಲರೂ ತಹಸೀಲ್ದಾರರೆದುರು ದೂರಿದರು.

ನಮ್ಮೂರಿನ ಕುಂದುಕೊರತೆಗಳು ನಮಗೆ ಗೊತ್ತಿರುತ್ತವೆ. ನಮ್ಮನ್ನು ಯಾವುದೇ ಹಂತದಲ್ಲಿಯೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುತ್ತಿರುವುದರಿಂದಲೇ ಪಟ್ಟಣದಲ್ಲಿ ಇಂತಹ ಸಮಸ್ಯೆಗಳು ಉದ್ಭವವಾಗುತ್ತಿವೆ. ಸಂತೆ ಸ್ಥಳವನ್ನು ಸ್ಥಳಾಂತರ ಮಾಡುವ ವಿಷಯದಲ್ಲಿ ಊರಿನಲ್ಲಿ ಎರಡು ಗುಂಪುಗಳನ್ನು ಈ ಮುಖ್ಯಾಧಿಕಾರಿಗಳೇ ಮಾಡಿಟ್ಟಿದ್ದಾರೆ ಎಂದು ಮಾಜಿ ಉಪಾಧ್ಯಕ್ಷ ಶ್ರೀಶೈಲಪ್ಪ ಬಂಡಿಹಾಳ ದೂರಿದರು.

ಸಂತೆಯನ್ನು ಸ್ಥಳಾಂತರಿಸುವ ಬಗ್ಗೆ ಅವರು ಯಾವ ಸದಸ್ಯರೊಂದಿಗೂ ಚರ್ಚಿಸಿಲ್ಲ. ಈ ವಿಷಯ ನಮಗೆ ಗೊತ್ತೇ ಇಲ್ಲ ಎಂದು ನಾವು ಸಾರ್ವಜನಿಕರೆದುರಿಗೆ ಹೇಳಿದಾಗ 'ನೀವೆಂತಹ ಸದಸ್ಯರೋ...' ಎಂದು ಸಾರ್ವಜನಿಕರು ನಮ್ಮನ್ನು ಆಡಿಕೊಂಡು ನಗುವಂತಾಗಿದೆ. ಅಂದರೆ ಈ ಮುಖ್ಯಾಧಿಕಾರಿಗಳು ಸಾರ್ವಜನಿಕರೆದುರಿಗೆ ನಮ್ಮನ್ನು ನಗೆಪಾಟಲಿಗೀಡುಮಾಡಿದ್ದಾರೆ ಎಂದು ಸದಸ್ಯ ದಾವೂದಲಿ ಕುದರಿ ತಮ್ಮ ಆಕ್ರೋಶವನ್ನು ಹೊರಹಾಕಿದರು.

ಇನ್ನೋರ್ವ ಸದಸ್ಯ ಮಾಲಗಿತ್ತಿಮಠ ಮಾತನಾಡಿ, ಅಭಿವೃದ್ಧಿ ಕಾರ್ಯಗಳೆಂದರೆ ಈ ಮುಖ್ಯಾಧಿಕಾರಿಗೆ ಆಗಿ ಬರುತ್ತಿಲ್ಲ. ಏನಾದರೂ ಸಲಹೆ ಸೂಚನೆ ನೀಡಲು ಹೋದರೆ ಅವುಗಳನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಕಾಮಗಾರಿಗಳ ಯಾವುದೇ ಮಾಹಿತಿ ಯಾವ ಸದಸ್ಯರಿಗೂ ಇಲ್ಲ ಎಂದು ದೂರಿದರು.



ಎಲ್ಲವನ್ನೂ ಆಲಿಸಿದ ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ, ನೀವು ಹೇಳುವುದನ್ನು ಕೇಳಿದರೆ ಮುಖ್ಯಾಧಿಕಾರಿ ನಿಮ್ಮನ್ನು ವಿಶ್ವಾಸಕ್ಕೆ ತೆಗದು–ಕೊಂಡಂತೆ ಕಾಣುತ್ತಿಲ್ಲ. ಮುಂದಿನ ವಾರದಲ್ಲಿ ನಾನು ಎಲ್ಲ ಸದಸ್ಯರ ಮತ್ತು ಮುಖ್ಯಾಧಿಕಾರಿಯೊಂದಿಗೆ ಸಿಬ್ಬಂದಿಯವರ ಸಭೆ ಕರೆಯುತ್ತೇನೆ. ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಯಾವುದೇ ಕಾರ್ಯವನ್ನು ಮುಖ್ಯಾಧಿಕಾರಿ ನಿರ್ವಹಿಸುವಂತಿಲ್ಲ. ಮೊದಲು ನಿಮ್ಮ ನಡುವಿನ ಭಿನ್ನಾಭಿಪ್ರಾಯಗಳು ದೂರವಾಗಲಿ. ಅಂದರೆ ಆಡಳಿತದ ಬಂಡಿ ಸುಗಮವಾಗಿ ಸಾಗಲು ಅನುಕೂಲವಾಗುತ್ತದೆ. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಹೇಳಿದಾಗ, ಎಲ್ಲ ಸದಸ್ಯರೂ ತಮ್ಮ ಒಪ್ಪಿಗೆ ಸೂಚಿಸಿದರು.

## ನೂತನವಾಗಿ ನಿರ್ಮಾಣವಾಗಲಿರುವ ಇಂದಿರಾ ಕ್ಯಾಂಟೀನ್ ಊಟದ ದರ ಹೆಚ್ಚಳ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಗ್ರಾಹಕರಿಂದ 27 ರೂ. ಸಂಗ್ರಹ, ಉಳಿದ 33 ರೂ. ಸರ್ಕಾರದಿಂದ ಸಬ್ಸಿಡಿ ಹೊಸದಾಗಿ ನಿರ್ಮಾಣವಾಗುವ ಕ್ಯಾಂಟೀನ್‌ಗಳಲ್ಲಿ ಹೊಸ ದರ ಅನ್ವಯ ಇಂದಿರಾ ಕ್ಯಾಂಟೀನ್‌ನಲ್ಲಿ ನೀಡುತ್ತಿದ್ದ ಊಟದ ದರ ಹೆಚ್ಚಿಸಲು ಶನಿವಾರ ನಡೆದ ಸಂಪುಟ ಸಭೆ ನಿರ್ಧರಿಸಿದ್ದು, ಒಂದು ಊಟದ ಬೆಲೆ 60 ರೂ. ದರ ನಿಗದಿ ಮಾಡಲಾಗಿದೆ.

ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಸ ಸಚಿವ ಸಂಪುಟ ಸಭೆಯ ನಂತರ ಸಚಿವ ಸಂಪುಟದ ನಿರ್ಣಯಗಳ ಕುರಿತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್ ಕೆ ಪಾಟೀಲ್ ಅವರು ಸಮ್ಮೇಳನ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದರು.

"ಇಂದಿರಾ ಕ್ಯಾಂಟೀನ್‌ಗಳಲ್ಲಿ ಒಂದು ಊಟದ ಬೆಲೆ 60 ರೂ. ದರ ನಿಗದಿ ಮಾಡಲಾಗಿದೆ. ಆ ಮೂಲಕ ಗ್ರಾಹಕರಿಂದ 27 ರೂ. ಸಂಗ್ರಹಿಸಲಿದ್ದು, ಉಳಿದ 33 ರೂ. ಸಬ್ಸಿಡಿಯನ್ನು ಸರ್ಕಾರ ನೀಡಲಿದೆ.



ರಾಜ್ಯಾದ್ಯಂತ ನೂತನವಾಗಿ ನಿರ್ಮಾಣವಾಗಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಈ ಹೊಸ ದರ ಇರಲಿದೆ. ಇನ್ನು ಬಿಬಿಎಂಪಿ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್‌ಗಳಲ್ಲಿ ಹಳೇ ದರ ಮುಂದುವರಿಕೆ ಆಗಲಿದೆ" ಎಂದು ತಿಳಿಸಿದರು.

"ಬಿಬಿಎಂಪಿ ಹೊರತುಪಡಿಸಿ ಸ್ಥಳೀಯ ಸಂಸ್ಥೆಗಳಲ್ಲಿ ಹೊಸದಾಗಿ 188 ಇಂದಿರಾ ಕ್ಯಾಂಟೀನ್ ತೆರೆಯಲು ಒಪ್ಪಿಗೆ ನೀಡಲಾಗಿದೆ. ಹೊಸ ಇಂದಿರಾ ಕ್ಯಾಂಟೀನ್‌ಗೆ 27 ಕೋಟಿ ರೂ. ನೀಡಲು ಅನುಮೋದಿಸಲಾಗಿದೆ. ಸ್ಥಳೀಯ ತಿಂಡಿ ತಿನಿಸು ಗಮನದಲ್ಲಿಟ್ಟುಕೊಂಡು ಇಂದಿರಾ ಕ್ಯಾಂಟೀನ್ ಮೆನು ಇರಲಿದೆ" ಎಂದರು.

## 26ರಂದು ಹುಬ್ಬಳ್ಳಿಯಲ್ಲಿ ಬೃಹತ್ ಉದ್ಯೋಗ ಮೇಳ

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಆ. 26ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹುಬ್ಬಳ್ಳಿಯ ಐಟಿ ಪಾರ್ಕನಲ್ಲಿ ವಿಶೇಷ ಚೇತನರಿಗಾಗಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಕೃಷ್ಣಾ ಲಮಾಣಿ ಹೇಳಿದರು.



ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶೇಷ ಚೇತನ ಯುವಕ ಯುವತಿಯರಿಗಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಎಸೆಸೆಲ್ಸಿಯಿಂದ ಪದವಿ, ಸ್ನಾತಕೋತ್ತರ ಪದವಿ ಪಡೆದ 18ರಿಂದ 35 ವರ್ಷದೊಳಗಿನ ವಿಶೇಷ ಚೇತನರು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ ಎಂದರು.

ಹುಬ್ಬಳ್ಳಿಯಲ್ಲಿ ನಡೆಯುವ ಉದ್ಯೋಗ ಮೇಳದಲ್ಲಿ 25ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಸುಮಾರು 500ಕ್ಕೂ ಹೆಚ್ಚು ಉದ್ಯೋಗಕಾಂಕ್ಷಿಗಳು ಮೇಳದಲ್ಲಿ ಭಾಗಿಯಾಗುವ ನಿರೀಕ್ಷೆಯಿದೆ. ಆಸಕ್ತರು 9480835960 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದರು.


ಸಮರ್ಥನಂ ಸಂಸ್ಥೆಯ 26 ವರ್ಷಗಳಿಂದ ▶▶ 3ನೇ ಪುಟಕ್ಕೆ

## ದಿ. ರಾಜೀವ ಗಾಂಧಿ, ದಿ. ದೇವರಾಜ ಅರಸು ಜಯಂತಿ ಆಚರಣೆ ಇಂದು

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಕಾಟನ್ ಸೇಲ್ ಸೊಸೈಟಿಯ ಆವರಣದಲ್ಲಿರುವ ಗದಗ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ರವಿವಾರ ಬೆಳಿಗ್ಗೆ 11ಕ್ಕೆ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಪ್ರಧಾನಿ ದಿ. ರಾಜೀವ ಗಾಂಧಿ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ಜಯಂತಿ ಆಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಚಿವರು ಹಾಲಿ ಹಾಗೂ ಮಾಜಿ ಶಾಸಕರು, ಪಕ್ಷದ ಜಿಲ್ಲಾ ಪಧಾದಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಗದಗ ಜಿ ಪಂ, ತಾ ಪಂ, ಗ್ರಾ ಪಂ, ಎಪಿಎಂಸಿ, ನಗರಸಭೆ, ಪ ಪಂ, ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ/ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ಮಾಜಿ ಸೈನಿಕರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಲೀಗಲ್ ರೀಫಾರ್ಮ್ಸ್ ವಿಭಾಗ, ಐಟಿ ಮತ್ತು ಡಾಟಾ ವಿಭಾಗ, ಮಾಧ್ಯಮ ವಿಭಾಗದ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.





## ಪೂರಕ ಪೌಷ್ಟಿಕ ಆಹಾರ ವಿತರಣೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಸರ್ಕಾರದ ಯೋಜನೆಯಾದ ಪೂರಕ ಪೌಷ್ಟಿಕ ಆಹಾರವನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ 1–10ನೇ ತರಗತಿ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟದೊಂದಿಗೆ ಪೂರಕ ಪೌಷ್ಟಿಕ ಆಹಾರವಾದ ಮೊಟ್ಟೆ, ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ಪ್ರಸ್ತುತ ಸಾಲಿನಲ್ಲಿ ವಿತರಿಸಲು ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ. ಸರ್ಕಾರದ ಆಶಯದಂತೆ ಶುಕ್ರವಾರದಂದು ಜಿಲ್ಲೆಯ ಗದಗ ಶಹರದ ಸರ್ಕಾರಿ ಪ್ರೌಢಶಾಲೆ ಸಿದ್ಧಲಿಂಗನಗರ ಶಾಲೆಯಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಮಕ್ಕಳಿಗೆ ವಿತರಿಸುವುದರ ಮೂಲಕ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ನಗರಸಭೆ ಅಧ್ಯಕ್ಷೆ ಉಷಾ ದಾಸರ, ಶಾಲಾ ಶಿಕ್ಷಣ ಇಲಾಖೆಯ ಡಿ.ಡಿ.ಪಿ.ಐ ಎಂ.ಎ. ರಡ್ಡೇರ, ಅಕ್ಷರ ದಾಸೋಹ ಕಾರ್ಯಕ್ರಮದ ಶಿಕ್ಷಣಾಧಿಕಾರಿ ಸರಸ್ವತಿ ಕನವಳ್ಳಿ , ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ, ಸಿದ್ಧಲಿಂಗನಗರದ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರಮತಿ ವಸ್ತ್ರದ ಹಾಜರಿದ್ದರು.

## ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

2023–24ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ ಮಾದರಿ ಶಾಲೆ, ಮುಂಡರಗಿಯಲ್ಲಿ ಖಾಲಿ ಇರುವ ಗಣಿತ ವಿಷಯದ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆಗಸ್ಟ್ 26 ರೊಳಗಾಗಿ ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಮಾದರಿ ▶▶ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಎಷ್ಟು ವರ್ಷ ಬದುಕಿದ್ದೀರಿ ಎಂಬುದಕ್ಕಿಂತ ಎಷ್ಟರ ಮಟ್ಟಿಗೆ ಪ್ರಾಮಾಣೀಕರಾಗಿ ಬದುಕಿದ್ದೀರಿ ಎಂಬುದು ಮುಖ್ಯ.

–ಅನಾಮಿಕ

## ಸಂಪಾದಕೀಯ

# ಪಡಿತರ ಚೀಟಿ ಇಲ್ಲದಿದ್ದರೂ ಸಿಗಲಿ ಗ್ಯಾರಂಟಿ ಯೋಜನೆಗಳು

ಕಾಂಗ್ರೆಸ್ ಸರಕಾರ ಐದು ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದು, ಅವುಗಳ ಅನುಷ್ಠಾನಕ್ಕೆ ಹರಸಾಹಸ ಪಡುತ್ತಿದೆ. ನುಡಿದಂತೆ ನಡೆದಿದ್ದೇವೆ ಎನ್ನುತ್ತಲೆ ಪ್ರಮುಖ ಮೂರು ಗ್ಯಾರಂಟಿಗಳು ರಾಜ್ಯದ ಜನರ ಮನೆ ಮನಕ್ಕೆ ತಲುಪಿದೆ. ಗೃಹಲಕ್ಷ್ಮಿ ಯೋಜನೆ ಇವತ್ತೊ, ನಾಳೆ ನೇರವಾಗಿ ಯಜಮಾನಿಯ ಖಾತೆಗೆ ಜಮಾ ಮಾಡಲಾಗುತ್ತದೆ ಎನ್ನುತ್ತಿದ್ದಾರೆ. ಇನ್ನು ಯುವ ನಿಧಿ ಡಿಸೆಂಬರ್ ನಂತರವೇ ಜಾರಿಯಾಗುವುದು ನಿಶ್ಚಯವಾಗಿದೆ.

ಅನ್ನಭಾಗ್ಯ, ಶಕ್ತಿ, ಉಚಿತ ವಿದ್ಯುತ್ ಈಗಾಗಲೇ ರಾಜ್ಯದ ಜನರಿಗೆ ಸಿಕ್ಕಿದೆ. ಅದರಲ್ಲೂ ಶಕ್ತಿ ಯೋಜನೆಗೆ ವ್ಯಾಪಕ ಸ್ಪಂದನೆ ವ್ಯಕ್ತವಾಗಿದೆ. ಇನ್ನು ಅನ್ನಭಾಗ್ಯ ಯೋಜನೆಯಡಿ 5 ಕೆಜಿ ಅಕ್ಕಿ ಮತ್ತು ಉಳಿದ ಐದು ಕೆಜಿ ಅಕ್ಕಿಯ ಹಣವನ್ನು ಫಲಾನುಭವಿ ಖಾತೆಗೆ ಜಮಾ ಮಾಡಲಾಗುತ್ತಿದೆ. ಬಹುತೇಕ ಫಲಾನುಭವಿಗಳಿಗೆ ಅಕ್ಕಿ ಹಣ ಸಂದಾಯ ಆಗಿದೆ.

ಸರಕಾರ ನುಡಿದಂತೆ ನಡೆದಿದೆ. ಆದರೆ ಪಡಿತರ ಚೀಟಿ ಇಲ್ಲದವರಿಗೂ ಎಲ್ಲ ಗ್ಯಾರಂಟಿ ಸಿಗಬೇಕಲ್ಲವೇ. ಪಡಿತರ ಚೀಟಿ ಇಲ್ಲದವರೂ ಮತ ಹಾಕಿದ್ದಾರೆ. ಕಾಂಗ್ರೆಸ್ ನೀಡಿದ ಗ್ಯಾರಂಟಿ ಕಾರ್ಡ್ ಪಡೆದುಕೊಂಡಿದ್ದಾರೆ. ಆದರೆ ಅಂಥವರಿಗೆ ಅನ್ನಭಾಗ್ಯ, ಗೃಹಲಕ್ಷ್ಮಿ ಯೋಜನೆಯ ಲಾಭ ಸಿಗದಿದ್ದರೆ ಹೇಗೆ?

ಮಾಹಿತಿ ಪ್ರಕಾರ ರಾಜ್ಯದಲ್ಲಿ ಸುಮಾರು 3 ಲಕ್ಷ ಜನ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಕೆ ಆರಂಭವಾದಲ್ಲಿ ಸುಮಾರು 4 ಲಕ್ಷ ಜನ ಅರ್ಜಿ ಸಲ್ಲಿಸುವ ಸಿದ್ಧತೆಯಲ್ಲಿದ್ದಾರೆ. ಅವರೆಲ್ಲರಿಗೂ ಅನ್ನಭಾಗ್ಯ ಯೋಜನೆ, ಗೃಹಲಕ್ಷ್ಮಿ ಯೋಜನೆ ಸಿಗುವುದಿಲ್ಲ ಎನ್ನುವುದನ್ನು ಸರಕಾರ ಅರ್ಥ ಮಾಡಿಕೊಳ್ಳಬೇಕು.

ಈ ಹಿಂದಿನ ಸರಕಾರದಲ್ಲಿ ಪಡಿತರ ಚೀಟಿಗಾಗಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿಯಾಗಬೇಕು. ಅರ್ಹರಿಗೆ ಬಿಪಿಎಲ್ , ಅಂತ್ಯೋದಯ ಪಡಿತರ ಚೀಟಿ ಹಂಚಿಕೆಯಾಗಬೇಕು. 2.5 ಲಕ್ಷ ಕುಟುಂಬಗಳಿಗೂ ಅನ್ನಭಾಗ್ಯ ಯೋಜನೆ ಸಿಗುವಂತಾಗಬೇಕು. ಇನ್ನು ಹೊಸದಾಗಿ ಅರ್ಜಿ ಸಲ್ಲಿಕೆ ಪ್ರಾರಂಭಿಸಿ, ಅರ್ಹರಿಗೆ ಪಡಿತರ ಚೀಟಿ ಮೂಲಕ ಗ್ಯಾರಂಟಿ ಯೋಜನೆ ತಲುಪಿದಾಗ ಮಾತ್ರ ಕಾಂಗ್ರೆಸ್ ನುಡಿದಂತೆ ನಡೆದಂತೆ.

ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಕುಟುಂಬದ ಸದಸ್ಯರ ಸಂಖ್ಯೆ 10 ಲಕ್ಷಕ್ಕೂ ಅಧಿಕವಾಗಿದೆ. ಹೊಸ ಅರ್ಜಿ ಸಲ್ಲಿಕೆ ಆರಂಭವಾದರೆ 40 ಲಕ್ಷ ಜನ ಸೇರ್ಪಡೆಯಾಗಲಿದ್ದಾರೆ. ಅವರೆಲ್ಲರಿಗೂ ಅನ್ನಭಾಗ್ಯ ಕೊಟ್ಟಲ್ಲಿ ಮಾತ್ರ ಹಸಿವು ಮುಕ್ತ ಕರ್ನಾಟಕ ಆಗಲು ಸಾಧ್ಯ. ಸರಕಾರ ಹೊಸ ಅರ್ಜಿ ಸಲ್ಲಿಕೆ ಆರಂಭಿಸಿ, ಅವರಿಗೆ ಗ್ಯಾರಂಟಿ ಯೋಜನೆ ತಲುಪಿಸುವ ಕೆಲಸ ಮಾಡಬೇಕು. ಅದಾದ ನಂತರವೇ ನುಡಿದಂತೆ ನಡೆದಿದ್ದೇವೆ ಎಂದು ಹೇಳಿಕೊಳ್ಳಬೇಕು.

## ಉದ್ಯಾನ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ ಅವಘಡ, ಮೆಜೆಸ್ಟಿಕ್ ಸುತ್ತಮುತ್ತ ದಟ್ಟ ಹೊಗೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆ ನಡೆದಿದೆ. ರೈಲಿನ ಬಿ1 ಬಿ2 ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಸ್ಥಳಕ್ಕೆ ಎರಡು ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಟ್ಟಿದ್ದಾರೆ.

ಉದ್ಯಾನ್ ಎಕ್ಸ್‌ಪ್ರೆಸ್ ರೈಲು ಮುಂಬೈಯಿಂದ ಇಂದು ಬೆಳಗ್ಗೆ 6 ಗಂಟೆಗೆ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ್ದು, ಪ್ಲಾಟ್ ಫಾರ್ಮ್ 4ರಲ್ಲಿ ನಿಂತಿತ್ತು. 7:30ರ ಸುಮಾರಿಗೆ ತಾಂತ್ರಿಕ ಸಮಸ್ಯೆಯಿಂದ ರೈಲ್ವೆ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಇಂಜಿನ್‌ನಿಂದ ಐದು ಬೋಗಿಗಳ ದೂರದಲ್ಲಿದ್ದ ಎರಡು ಬೋಗಿಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬಳಿಕ ಸ್ಥಳೀಯ ಪೊಲೀಸರು ಬೆಂಕಿ ನಂದಿಸಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ಬೆಂಕಿ ನಂದಿಸಲು ಸಾಧ್ಯವಾಗಿಲ್ಲ.

ಕೂಡಲೇ ಎರಡು ಅಗ್ನಿಶಾಮಕ ವಾಹನ ಕರೆಸಿಕೊಳ್ಳಲಾಯಿತು. ನಂತರ ಅಗ್ನಿಶಾಮಕ ಸಿಬ್ಬಂದಿ ಸತತ ಅರ್ಧ ಗಂಟೆ ಬೆಂಕಿ ನಂದಿಸಲು ಪ್ರಯತ್ನ ಪಟ್ಟರೂ 2 ಎಸಿ ಕೋಚ್‌ಗಳು ಸಂಪೂರ್ಣ ಸುಟ್ಟು ಹೋಗಿವೆ. ಬಳಿಕ ಸತತ ಪ್ರಯತ್ನದ ನಂತರ ಬೆಂಕಿಯನ್ನು ನಂದಿಸಲಾಗಿದೆ. ಬೆಂಕಿ ಸಂಪೂರ್ಣ ಹತೋಟಿಗೆ ಬಂದ ನಂತರ ಹಾನಿಗೊಳಗಾದ ಬೋಗಿಗಳನ್ನು ಬೇರೆಡೆ ಸ್ಥಳಾಂತರಿಸಲಾಗುತ್ತಿದೆ. ಬೆಂಕಿಯಿಂದಾಗಿ ಮೆಜೆಸ್ಟಿಕ್ ಸುತ್ತಮುತ್ತ ದಟ್ಟ ಹೊಗೆ ಆವರಿಸಿತ್ತು.

## ದ್ವೇಷ ಭಾಷಣ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸುಪ್ರೀಂ ಕೋರ್ಟ್ ಸೂಚನೆ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ದ್ವೇಷದ ಭಾಷಣ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಅವರು ಯಾವ ಪಕ್ಷಕ್ಕೆ ಸೇರಿದವರಾಗಿದ್ದರೂ ಸಮಾನವಾಗಿ ಶಿಕ್ಷೆಗೆ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ದ್ವೇಷ ಭಾಷಣವನ್ನು ತಡೆಯಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಮಹತ್ವದ ಸೂಚನೆಯನ್ನು ನೀಡಿದೆ.

ಕೇರಳದಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ನಡೆಸಿದ ರ್ಯಾಲಿ, ನೂಹ್ ನಲ್ಲಿ ನಡೆದ ಹಿಂಸಾಚಾರಕ್ಕೆ ಪ್ರಚೋದನೆಗೆ ಸಂಬಂಧಿಸಿದ ದ್ವೇಷ ಭಾಷಣದ ಬಗ್ಗೆ ಸುಪ್ರೀಂ ಕೋರ್ಟ್ ಗಮನಕ್ಕೆ ತಂದಾಗ, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್‌ವಿಎನ್ ಭಟ್ಟಿ ಅವರ ಪೀಠವು ಈ ಹೇಳಿಕೆ ನೀಡಿದೆ.

ಯಾವುದೇ ರೀತಿಯ ದ್ವೇಷದ ಭಾಷಣದಲ್ಲಿ ಕಾನೂನಿನ ಪ್ರಕಾರ ವ್ಯವಹರಿಸಲಾಗುವುದು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ನುಹ್ ಘಟನೆಯ ನಂತರ ಮುಸ್ಲಿಮರ ಬಹಿಷ್ಕಾರಕ್ಕೆ ಹಲವು ಗುಂಪುಗಳು ಮಾಡಿದ ಕರೆಗಳ ವಿರುದ್ಧದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಆ. 25ಕ್ಕೆ ಪ್ರಕರಣವನ್ನು ಮುಂದೂಡಿದೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

**‘ವಿಜಯಸಾಕ್ಷಿ’**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## ಹಬ್ಬದ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

# ನಾಗರಪಂಚಮಿ ನಾಡಿಗೆ ದೊಡ್ಡದು





ಹೊಸ ಸಂವತ್ಸರದಲ್ಲಿ ಆಚರಿಸಲ್ಪಡುವ ಮೊತ್ತಮೊದಲ ಹಬ್ಬವೆಂದರೆ, ನಾಗರ ಪಂಚಮಿ. ಅದಕ್ಕೆಂದೇ ‘ನಾಗರ ಪಂಚಮಿ ನಾಡಿಗೆ ದೊಡ್ಡದು’ ಎಂಬ ಉಕ್ತಿಯಿರುವುದು. ಈ ನಾಗ ಪಂಚಮಿಯ ನಂತರ, ಹಬ್ಬಗಳ ಸಾಲೇ ಇರುತ್ತದೆ. ಹಾಗಾದರೆ, ನಾಡಿಗೆ ದೊಡ್ಡದು ಎನಿಸಿಕೊಂಡಿರುವ ಈ ಹಬ್ಬದ ಹಿನ್ನೆಲೆಯನ್ನೂ ನಾವು ತಿಳಿಯಬೇಕು.

ಆಸ್ತಿಕ ಋಷಿಯು ಸರ್ಪಯಜ್ಞ ಮಾಡುವ ಜನಮೇಜಯ ರಾಜನನ್ನು ಪ್ರಸನ್ನಗೊಳಿಸಿಕೊಂಡನು. ಜನಮೇಜಯ ರಾಜನು ‘ವರವನ್ನು ಕೇಳು’ ಎಂದಾಗ, ಆಸ್ತಿಕನು ಸರ್ಪಯಜ್ಞವನ್ನು ನಿಲ್ಲಿಸಬೇಕು ಎಂಬ ವರವನ್ನು ಕೇಳಿಕೊಂಡನು. ಜನಮೇಜಯನು ಸರ್ಪಯಜ್ಞವನ್ನು ನಿಲ್ಲಿಸಿದ ದಿನವು ಪಂಚಮಿಯಾಗಿತ್ತು.

ನಾಗದೇವತೆಯು ಸಂಪೂರ್ಣ ಬ್ರಹ್ಮಾಂಡದ ಕುಂಡಲಿನಿಯಾಗಿದ್ದಾನೆ. ಪಂಚಪ್ರಾಣವೆಂದರೆ ಪಂಚಭೌತಿಕ ತತ್ವದಿಂದ ಉಂಟಾದ ಶರೀರದ ಸೂಕ್ಷ್ಮರೂಪವಾಗಿದೆ. ಸ್ಥೂಲ ದೇಹವು ಪ್ರಾಣಹೀನವಾಗಿದೆ ಮತ್ತು ಸ್ಥೂಲ ದೇಹದಲ್ಲಿ ಚಲಿಸುವ ಪ್ರಾಣವಾಯುವು ಪಂಚಪ್ರಾಣದಿಂದ ಬರುತ್ತದೆ. 5 ಯುಗಗಳ ಹಿಂದೆ ಸತ್ಯೇಶ್ವರೀ ಎಂಬ ಕನಿಷ್ಠ ದೇವಿಯಿದ್ದಳು. ಸತ್ಯೇಶ್ವರನು ಅವಳ ಸಹೋದರನಾಗಿದ್ದನು. ಸತ್ಯೇಶ್ವರನು ನಾಗರಪಂಚಮಿಯ ಹಿಂದಿನ ದಿನ ಮೃತ್ಯು ಹೊಂದಿದನು. ಆಗ ಸಹೋದರನ ಮೃತ್ಯುವಿನ ಶೋಕದಲ್ಲಿ ಸತ್ಯೇಶ್ವರಿಯು ಆಹಾರವನ್ನು ಸ್ವೀಕರಿಸಲಿಲ್ಲ. ಆದುದರಿಂದ ಆ ದಿನ ಸ್ತ್ರೀಯರು ಸಹೋದರನ ಹೆಸರಿನಲ್ಲಿ ಉಪವಾಸ ಮಾಡುತ್ತಾರೆ. ‘ಸಹೋದರನಿಗೆ ಅಖಂಡ ಆಯುಷ್ಯ ದೊರಕಲಿ, ಅನೇಕ ಆಯುಧಗಳು ಪ್ರಾಪ್ತವಾಗಲಿ ಮತ್ತು ಅವನು ಪ್ರತಿಯೊಂದು ದುಃಖ ಮತ್ತು ಸಂಕಟಗಳಿಂದ ಪಾರಾಗಲಿ’ ಎನ್ನುವುದು ಸಹ ಈ ಉಪವಾಸದ ಹಿಂದಿನ ಕಾರಣವಾಗಿದೆ. ನಾಗರಪಂಚಮಿಯ ಹಿಂದಿನ ದಿನ ಪ್ರತಿಯೊಬ್ಬ ಸಹೋದರಿಯು ದೇವರಲ್ಲಿ ಮೊರೆ ಇಡುವುದರಿಂದ ಅವಳ ಸಹೋದರನಿಗೆ ಲಾಭವಾಗುತ್ತದೆ ಮತ್ತು ಅವನ ರಕ್ಷಣೆಯಾಗುತ್ತದೆ ಎಂಬ ನಂಬಿಕೆಯಿದೆ.

ಸತ್ಯೇಶ್ವರಿಗೆ ಅವಳ ಸಹೋದರನು ನಾಗರೂಪದಲ್ಲಿ ಕಂಡನು. ಆಗ ಅವಳು ಆ ನಾಗರೂಪವನ್ನು ತನ್ನ ಸಹೋದರನೆಂದು ಭಾವಿಸಿದಳು. ಆಗ ನಾಗದೇವನು, ನನ್ನನ್ನು ಸಹೋದರನೆಂದು ಭಾವಿಸಿ ಪೂಜೆ ಮಾಡಿದ ಸಹೋದರಿಯ ರಕ್ಷಣೆಯನ್ನು ನಾನು ಮಾಡುವೆನು ಎಂದು ಅವಳಿಗೆ ವಚನ ನೀಡಿದನು. ಆದುದರಿಂದಲೇ ಆ ದಿನ ಪ್ರತಿಯೊಬ್ಬ ಸ್ತ್ರೀಯು ನಾಗನ ಪೂಜೆ ಮಾಡಿ ನಾಗರಪಂಚಮಿಯನ್ನು ಆಚರಿಸುತ್ತಾಳೆ.

ಶೇಷನಾಗನು ಪಾತಾಳದಲ್ಲಿ ವಾಸಿಸುತ್ತಾನೆ. ಅವನು ತನ್ನ ಹೆಡೆಯ ಮೇಲೆ ಪೃಥ್ವಿಯನ್ನು ಧರಿಸಿದ್ದಾನೆ. ಅವನಿಗೆ ಸಹಸ್ರ ಹೆಡೆಗಳಿವೆ. ಪ್ರತಿಯೊಂದು ಹೆಡೆಯ ಮೇಲೆ ಒಂದು ವಜ್ರವಿದೆ. ಅವನು ಶ್ರೀವಿಷ್ಣುವಿನ ತಮೋಗುಣದಿಂದ ಉತ್ಪನ್ನವಾಗಿದ್ದಾನೆ. ಪ್ರತಿಯೊಂದು ಕಲ್ಪದ ಅಂತ್ಯದಲ್ಲಿ ಶ್ರೀವಿಷ್ಣು ಮಹಾಸಾಗರದಲ್ಲಿ ಶೇಷಾಸನದ ಮೇಲೆ ಶಯನ ಮಾಡುತ್ತಾನೆ. ತ್ರೇತಾಯುಗದಲ್ಲಿ ಶ್ರೀವಿಷ್ಣು ರಾಮನ ಅವತಾರವನ್ನು ತೆಗೆದುಕೊಂಡಾಗ ಶೇಷನು ಲಕ್ಷ್ಮಣನ ಅವತಾರ ತಾಳಿದ್ದನು. ದ್ವಾಪರ ಮತ್ತು ಕಲಿಯುಗದ ಸಂಧಿಕಾಲದಲ್ಲಿ ಕೃಷ್ಣನ ಅವತಾರವಾದಾಗ ಶೇಷನು ಬಲರಾಮನಾಗಿದ್ದನು.

ಶ್ರೀಕೃಷ್ಣನು ಯಮುನಾ ನದಿಯ ಆಳದಲ್ಲಿದ್ದ ಕಾಲಿಯಾ ನಾಗನನ್ನು ಮರ್ದನ ಮಾಡಿದನು. ಆ ದಿನವು ಶ್ರಾವಣ ಶುಕ್ಲ ಪಂಚಮಿಯಾಗಿತ್ತು. ನಾಗಗಳಲ್ಲಿನ ಶ್ರೇಷ್ಠನಾದ ‘ಅನಂತ’ನೇ ನಾನು’, ಎಂದು ಗೀತೆಯಲ್ಲಿ (10.29) ಶ್ರೀಕೃಷ್ಣ ತನ್ನ ವಿಭೂತಿಯನ್ನು ಹೇಳುತ್ತಾನೆ. ಅನಂತ, ವಾಸುಕೀ, ಶೇಷ, ಪದ್ಮನಾಭ, ಕಂಬಲ, ಶಂಖಪಾಲ, ಧೃತರಾಷ್ಟ್ರ, ತಕ್ಷಕ ಮತ್ತು ಕಾಲಿಯಾ ಹೀಗೆ ಒಂಭತ್ತು ಜಾತಿಯ ನಾಗಗಳ ಆರಾಧನೆಯನ್ನು ಮಾಡುತ್ತಾರೆ. ಇದರಿಂದ ಸರ್ಪಭಯವಿರುವುದಿಲ್ಲ ಮತ್ತು ವಿಷದಿಂದ ತೊಂದರೆಯಾಗುವುದಿಲ್ಲ ಎಂದು ಪುರಾಣಗಳು ಹೇಳುತ್ತವೆ.

ನಾಗರಪಂಚಮಿಯ ದಿನ ಅರಿಶಿನ ಅಥವಾ ರಕ್ತಚಂದನದಿಂದ ಮಣೆಯ ಮೇಲೆ ನವನಾಗಗಳ ಆಕೃತಿಗಳನ್ನು ಬಿಡಿಸಿ ಅವುಗಳ ಪೂಜೆಯನ್ನು ಮಾಡಿ ಹಾಲು ಮತ್ತು ಅರಳಿನ ನೈವೇದ್ಯವನ್ನು ಅರ್ಪಿಸಬೇಕು.

ನವನಾಗಗಳು ಪವಿತ್ರಕಗಳ ಒಂಬತ್ತು ಪ್ರಮುಖ ಗುಂಪುಗಳಾಗಿವೆ. ಪವಿತ್ರಕಗಳೆಂದರೆ ಸೂಕ್ಷ್ಮಾತಿಸೂಕ್ಷ್ಮ ದೈವೀ ಕಣಗಳು.

ನಾಗರಪಂಚಮಿಯಂದು ದಿನ ಏನನ್ನೂ ಹೆಚ್ಚಬಾರದು, ಕೊಯ್ಯಬಾರದು, ಕರಿಯಬಾರದು, ಒಲೆಯ ಮೇಲೆ ತವೆಯನ್ನು ಇಡಬಾರದು ಮುಂತಾದ ನಿಯಮಗಳನ್ನು ಪಾಲಿಸಬೇಕು. ಈ ದಿನ ಭೂಮಿಯನ್ನು ಅಗೆಯಬಾರದೆಂಬ ನಿಯಮವೂ ಚಾಲ್ತಿಯಲ್ಲಿದೆ.

ಪಂಚಪ್ರಾಣಗಳೇ ಪಂಚನಾಗಗಳಾಗಿವೆ. ನಾಗರಪಂಚಮಿಯ ದಿನದಲ್ಲಿ ವಾತಾವರಣವು ಸ್ಥಿರವಾಗಿರುತ್ತದೆ. ಸಾತ್ವಿಕತೆಯನ್ನು ಗ್ರಹಿಸಲು ಈ ಕಾಲವು ಅತ್ಯಂತ ಯೋಗ್ಯ ಮತ್ತು ಬಹಳ ಉಪಯುಕ್ತವಾಗಿದೆ. ಈ ದಿನದಂದು ಶೇಷನಾಗ ಮತ್ತು ಶ್ರೀವಿಷ್ಣುವಿಗೆ ಈ ರೀತಿ ಪ್ರಾರ್ಥನೆ ಮಾಡಬೇಕು. ‘ತಮ್ಮ ಕೃಪೆಯಿಂದ ಈ ದಿನದಂದು ಶಿವ ಲೋಕದಿಂದ ಪ್ರಕ್ಷೇಪಿತವಾಗುವ ಲಹರಿಗಳು ನನ್ನಿಂದ ಹೆಚ್ಚೆಚ್ಚು ಗ್ರಹಣವಾಗಲಿ. ನನ್ನ ಆಧ್ಯಾತ್ಮಿಕ ಪ್ರಗತಿಗೆ ಎದುರಾಗುವ ಎಲ್ಲ ಅಡಚಣೆಗಳೂ ನಾಶವಾಗಲಿ. ದೇವತೆಗಳ ಶಕ್ತಿಯು ನನ್ನ ಪಂಚಪ್ರಾಣಗಳಲ್ಲಿ ಸಂಗ್ರಹವಾಗಿ ಅದು ಈಶ್ವರ ಪ್ರಾಪ್ತಿಗಾಗಿ ಮತ್ತು ರಾಷ್ಟ್ರ ರಕ್ಷಣೆಗಾಗಿ ಉಪಯೋಗವಾಗಲಿ. ನನ್ನ ಪಂಚಪ್ರಾಣದ ಶುದ್ಧಿಯಾಗಲಿ.’

– **ವಿನೋದ ಕಾಮತ್**.
ವಕ್ತಾರರು, ಸನಾತನ ಸಂಸ್ಥೆ.

## ಶ್ರಾವಣ ಮಾಸದ ಹಬ್ಬಗಳ ಪರಿಚಯ

# ಶ್ರಾವಣ ಬಂತು ನಾಡಿಗೆ......

ಹಿಂದೂ ಪಂಚಾಂಗದ ಪ್ರಕಾರ ಸಂವತ್ಸರದ 5ನೇ ಮಾಸವಾದ ಶ್ರಾವಣವು ತನ್ನದೇ ಆದ ಪ್ರಾಶಸ್ತ್ಯ, ಧಾರ್ಮಿಕತೆ ಹಾಗೂ ಮಾನ್ಯತೆ ಪಡೆದಿದೆ. ಶ್ರಾವಣ ಮಾಸದಲ್ಲಿ ಹಬ್ಬಗಳ ಆಚರಣೆ ಸಲುವಾಗಿ ಮನೆಗಳನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಹಚ್ಚುತ್ತಾರೆ. ತಳಿರು ತೋರಣಗಳಿಂದ ಬಾಗಿಲುಗಳನ್ನು ಶೃಂಗರಿಸುತ್ತಾರೆ. ಪವಿತ್ರವಾದ ಈ ಮಾಸದಲ್ಲಿ ಭಗವಂತನ ನಾಮಸ್ಮರಣೆ, ಆರಾಧನೆ, ಭಗವಂತನ ಕಥಾ ಕೀರ್ತನ ಶ್ರವಣ ಮಾಡುವುದರಿಂದ ಜೀವನ ಸಾರ್ಥಕ.

**ಭೀಮನ ಅಮವಾಸ್ಯೆ:** ಭೀಮನ ಅಮಾವಾಸ್ಯೆಯನ್ನು ಆಷಾಢ ಅಮಾವಾಸ್ಯೆಯೆಂದು ಆಚರಿಸಲಾಗುತ್ತದೆ. ವಿವಾಹಿತ ಮಹಿಳೆಯರು ತಮ್ಮ ಪತಿಯ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ವ್ರತವನ್ನು ಮಾಡುತ್ತಾರೆ. ಈ ಅಮಾವಾಸ್ಯೆಯ ದಿನ ಮಹಿಳೆಯರು ಶಿವ ಮತ್ತು ಪಾರ್ವತಿ ದೇವಿಯನ್ನು ಪೂಜಿಸುತ್ತಾರೆ.

**ಶ್ರಾವಣ ಸೋಮವಾರ:** ಈ ಮಾಸದ ಪ್ರತಿ ಸೋಮವಾರವು ಶ್ರಾವಣ ಸೋಮವಾರವೆಂದೇ ಪ್ರಸಿದ್ಧಿಯಾಗಿದೆ. ಶ್ರಾವಣ ಸೋಮವಾರ ಎಲ್ಲ ಶಿವ ದೇವಾಲಯಗಳಲ್ಲಿ ಹಾಲಿನ ಅಭಿಷೇಕ ಮತ್ತು ಬಿಲ್ವಾರ್ಚನೆಗೆ ಆದ್ಯತೆ ನೀಡಲಾಗುತ್ತದೆ. ಈ ದಿನ ಶಿವನ ಪೂಜೆ, ಧ್ಯಾನಗಳನ್ನು ಮಾಡುತ್ತಾ ಸೂರ್ಯಾಸ್ತದವರೆಗೆ ಉಪವಾಸವನ್ನು ಆಚರಿಸುತ್ತಾರೆ.

**ಮಂಗಳ ಗೌರಿ ವ್ರತ:** ವಿವಾಹಿತ ಮಹಿಳೆಯರು ತಮ್ಮ ಗಂಡನ ದೀರ್ಘಾಯುಷ್ಯ ಮತ್ತು ಸಂತೋಷಕ್ಕಾಗಿ ವ್ರತವನ್ನು ಆಚರಿಸುತ್ತಾರೆ. ಅವಿವಾಹಿತರೂ ಕೂಡ ಶ್ರಾವಣ ಮಾಸದಲ್ಲಿ ಪರಮೇಶ್ವರನ ಪೂಜೆ ಮಾಡಿದರೆ ಒಳ್ಳೆಯ ಫಲ ಪಡೆಯುತ್ತಾರೆ ಎಂಬ ನಂಬಿಕೆಯಿದೆ.

ನಾಗರ ಚೌತಿ, ನಾಗರ ಪಂಚಮಿ: ನಾಗರಚೌತಿ ಹಾಗೂ ಪಂಚಮಿಯಂದು ಮಹಿಳೆಯರು ಹುತ್ತಗಳಿಗೆ, ನಾಗಗಳು ಇರುವ ಸ್ಥಳಗಳಿಗೆ ಹೋಗಿ ಹಾಲು ಹೊಯ್ದು ಬರುತ್ತಾರೆ. ಕೃಷಿ ಕೆಲಸ ಮಾಡುವಾಗ ಹಾವುಗಳು ಕಚ್ಚದಿರಲಿ, ಮನೆಗಳಿಗೆ ಹಾವುಗಳು ನುಗ್ಗಿದಾಗ ಯಾವುದೇ ತೊಂದರೆ ಸಂಭವಿಸದಿರಲಿ ಎಂದು ಶ್ರಾವಣ ಮಾಸದಲ್ಲಿ ನಾಗಗಳನ್ನು ಪೂಜಿಸಲಾಗುತ್ತದೆ.



**ಸಿರಿಯಾಲ ಷಷ್ಠಿ (ಮಕ್ಕಳ ಹಬ್ಬ):** ಈ ದಿನ ಶಿವನನ್ನು ಪೂಜಿಸುತ್ತಾರೆ. ಹೊಸದಾಗಿ ಮದುವೆಯಾದವರು ಹಾಗೂ ಚಿಕ್ಕ ಮಕ್ಕಳನ್ನು ಹೊಂದಿರುವ ತಾಯಂದಿರು ಮನೆ ಮನೆಗೆ ಹೋಗಿ ಮೊಸರು, ಅನ್ನ, ಪಾಯಸ, ಕರ್ಚಿಕಾಯಿ, ಉಪ್ಪಿನಕಾಯಿ ಹಂಚುತ್ತಾರೆ. ಹೀಗೆ ಹಂಚುವುದರಿಂದ ಮಕ್ಕಳ ಆಯುಷ್ಯ, ಸಂತತಿ ಹೆಚ್ಚುತ್ತದೆ ಎಂಬ ನಂಬಿಕೆಯಿದೆ.

ಬುಧ ಬೃಹಸ್ಪತಿ ಪೂಜೆ: ಜ್ಞಾನವನ್ನು ನೀಡುವವರು ಗುರುವಾದರೆ, ಬುದ್ಧಿ–ಚತುರತೆಗೆ ಕಾರಣೀಭೂತ ಬುಧನು ಚಂದ್ರನ ಮಗನಾಗಿದ್ದಾರೆ. ದೇವತೆಗಳ ಗುರು ಬೃಹಸ್ಪತಿಯಾಗಿದ್ದು ಸಕಲ ವೇದವಿದ್ಯಾ, ಧಾರ್ಮಿಕತೆ, ವಿನಯಶೀಲ, ನಿಪುಣತೆ ಮೇಧಾಶಕ್ತಿಗೆ ಬೃಹಸ್ಪತಿಗಳ ಅನುಗ್ರಹ ನಮಗೆಲ್ಲ ಬೇಕು. ಆ ಕಾರಣದಿಂದಾಗಿಯೇ ಬುಧ–ಬೃಹಸ್ಪತಿಯ ಚಿತ್ರಗಳನ್ನು ಮಣೆಯ ಮೇಲಿಟ್ಟು ರಂಗವಲ್ಲಿ ಹಾಕಿ ಧಾರ್ಮಿಕ ವಿಧಿ–ವಿಧಾನಗಳಿಂದ ಪೂಜೆ ಮಾಡುವರು.

**ಶ್ರಾವಣ ಶುಕ್ರವಾರ–ಶನಿವಾರ:** ಶ್ರಾವಣ ಶುಕ್ರವಾರ ಹಾಗೂ ಶನಿವಾರದಂದು ಮಹಾಲಕ್ಷ್ಮೀಯನ್ನು ಭಕ್ತಿಯಿಂದ ಪೂಜಿಸುತ್ತಾರೆ. ಲಕ್ಷ್ಮೀ ದೇವಿಯು ಧನ, ಧಾನ್ಯ, ಸಿರಿ ಸಂಪತ್ತಲ್ಲದೇ, ಸೌಭಾಗ್ಯ, ಸಂತಾನ, ನೆಮ್ಮದಿ, ವಿದ್ಯೆ, ಶಾಂತಿ, ಜ್ಞಾನ, ವಿಜಯ, ಬಲಗಳನ್ನು ಪರಿಪಾಲಿಸುವಂತೆ ಲಕ್ಷ್ಮೀದೇವಿಯನ್ನು ಭಕ್ತರುಗಳು ಬೇಡಿಕೊಳ್ಳುತ್ತಾರೆ.

**ವರ ಮಹಾಲಕ್ಷ್ಮೀ ವ್ರತ:** ಸಂಪತ್ತಿನ ಅಧಿದೇವತೆ ಲಕ್ಷ್ಮೀಯನ್ನು ಈ ದಿನ ಪೂಜಿಸಿದರೆ, ಅಷ್ಟೈಶ್ವರ್ಯ ಪ್ರಾಪ್ತಿಯಾಗುತ್ತದೆ. ವರಮಹಾಲಕ್ಷ್ಮಿ ವ್ರತವನ್ನಾಚರಿಸಿದರೆ ಜ್ಞಾನ, ಐಶ್ವರ್ಯ, ಸುಖ, ಆರೋಗ್ಯ ಇತ್ಯಾದಿ ಅಷ್ಟ ಐಶ್ವರ್ಯ ಪ್ರಾಪ್ತಿಯಾಗುತ್ತದೆ ಎಂಬುದು ನಂಬಿಕೆ. ವರಗಳನ್ನು ದಯಪಾಲಿಸುವುದರಿಂದ ಲಕ್ಷ್ಮೀಯನ್ನು ವರಮಹಾಲಕ್ಷ್ಮೀಯೆಂದು ಪೂಜಿಸುತ್ತಾರೆ.

**ನೂಲ ಹುಣ್ಣಿಮೆ ಹಾಗೂ ರಾಖೀ ಕಟ್ಟುವ ಹಬ್ಬ:** ಪ್ರತಿವರ್ಷ ನೂಲ ಹುಣ್ಣಿಮೆಯಂದು ಯಜ್ಞೋಪವೀತ ಧಾರಣೆಯನ್ನು ಮಾಡಿಕೊಳ್ಳುತ್ತಾರೆ. ಈ ದಿನ ನೂಲನ್ನು ಪೂಜಿಸುವ ವೈದಿಕ ಪರಂಪರೆಯಲ್ಲಿ ಜನಿವಾರ ಧರಿಸುವ ದಿನವೆಂದು ಆಚರಿಸಲಾಗುತ್ತಿದೆ. ಉಪನಯನ ನಂತರ ಪ್ರತಿ ವರ್ಷವೂ ಶ್ರಾವಣದ ನೂಲ ಹುಣ್ಣಿಮೆಯಂದು ಯಜ್ಞೋಪವೀತ ಧರಿಸುವುದು ಅತಿ ಮುಖ್ಯವಾಗಿರುತ್ತದೆ. ಸಂವತ್ಸರ ಕೃತ ದೋಷ ಪರಿಹಾರಾರ್ಥವಾಗಿ ದೇವರಿಗೆ ಕ್ಷಮೆ ಕೋರಿ, ಪಾಪ ನಿವಾರಿಸಿ, ಧಾರ್ಮಿಕ ಕಾರ್ಯಗಳನ್ನು ಆಚರಣೆ ಮಾಡಲಾಗುತ್ತದೆ. ಹಿಂದೂ ಸಂಪ್ರದಾಯದಂತೆ ಅಕ್ಕ–ತಂಗಿಯರು ತಮ್ಮ ಅಣ್ಣ–ತಮ್ಮಂದಿರಿಗೆ ರಾಖಿಯನ್ನು ಕಟ್ಟುತ್ತಾರೆ.

**ಗೋಕುಲಾಷ್ಟಮಿ:** ಶ್ರೀ ಕೃಷ್ಣ ಪರಮಾತ್ಮನು ದುಷ್ಟರ ಹಾಗೂ ಅಧರ್ಮಿಗಳ ಸಂಹಾರಕ್ಕಾಗಿ ಶ್ರಾವಣಮಾಸ ಕೃಷ್ಣ ಪಕ್ಷದ ಅಷ್ಟಮಿ ತಿಥಿಯಂದು ಅವತರಿಸುತ್ತಾನೆ. ಅಂದಿನ ದಿವಸ ಕೃಷ್ಣ ಪರಮಾತ್ಮನನ್ನು ಉಪಾಸನೆಗೈಯುತ್ತಾರೆ. ಬೀದಿಬೀದಿಗಳಲ್ಲಿ ಮಕ್ಕಳು ಮೊಸರು ಗಡಿಗೆಯನ್ನು ಒಡೆಯುವ ಆಟವಾಡಿ ಸಂಭ್ರಮಿಸುತ್ತಾರೆ.

ಗುರುರಾಯರ ಆರಾಧನೆ: ಕಲಿಯುಗದ ಕಾಮಧೇನು ಶ್ರೀರಾಘವೇಂದ್ರ ರಾಯರ ಆರಾಧನೆಯನ್ನು ಶ್ರಾವಣ ಮಾಸದ ಕೃಷ್ಣ ಪಕ್ಷದ ಪ್ರತಿಪದ, ದ್ವಿತೀಯ, ತೃತೀಯದಂದು ಆಚರಿಸುತ್ತಾರೆ. ಲೋಕ ಕಲ್ಯಾಣಕ್ಕಾಗಿ ತಮ್ಮ ಜ್ಞಾನಸುಧೆಯಿಂದ ಸಮಾಜದಲ್ಲಿನ ಎಲ್ಲ ವರ್ಗದ ಜನರಿಗೆ ಅನುಗ್ರಹಿಸಿದ ಆಧ್ಯಾತ್ಮಿಕತೆ, ಧಾರ್ಮಿಕತೆಯಿಂದ ಮೆರೆದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನು ಮೂರು ದಿನಗಳ ಕಾಲ ಭಕ್ತಾಧಿಗಳು ಆಚರಿಸುತ್ತಾರೆ.

– **ಅಂಜನಾ ರಾಘವೇಂದ್ರ**
ಕುಬೇರ, ಗದಗ.

## ಮನೆ–ಮನಗಳ ಕೊಳೆ ಕಳೆಯುವ ನಾಗರ ಪಂಚಮಿ ಹಬ್ಬದ ಸಡಗರ

# ನಾಗಪ್ಪನಿಗೆ ಹಾಲೆರೆಯೋಣ ಬನ್ನಿ...

ಜೋಕಾಲಿ ಹಬ್ಬ, ಉಂಡಿಯ ಹಬ್ಬ, ಅಣ್ಣ–ತಂಗಿಯರ ಹಬ್ಬ, ವರ್ಷದ ಮೊದಲ ಹಬ್ಬ ಎಂದೆಲ್ಲ ಕರೆಯುವ ಪಂಚಮಿ ಹಬ್ಬ, ಜನಪದರ ಪಾಲಿಗೆ ಸಂಭ್ರಮ ಸಡಗರದ ಹಬ್ಬ. ಜನಮೇಜಯ ರಾಜನ ಸರ್ಪಯಜ್ಞ ಮುಗಿದ ದಿನ ಶ್ರಾವಣದ ಪಂಚಮಿ. ಬಾಲಕೃಷ್ಣ ಕಾಳಿಂಗಮರ್ದನ ಮಾಡಿದ್ದು ಕೂಡ ಅಂದೇ. ಇನ್ನೂ ಹಲವಾರು ಕಥೆಗಳು ಪುರಾಣಗಳಲ್ಲಿ ಉಲ್ಲೇಖವಾಗಿದೆ.

ಕಲ್ಲಿನ ನಾಗರ ಹಾವಿಗೆ ಮೊದಲ ದಿನ ತನಿ ಎರೆಯುವ ಮೂಲಕ, ಎರಡನೇ ದಿನ ಹಾಲು ಹಾಕುವುದರ ಮೂಲಕ, ಕಡಲೆ ಉಸುಳಿ, ಅರಳಿಟ್ಟು ಒಗ್ಗರಣೆ ಹಲಬಗೆಯ ಸೇಂಗಾ ಎಳ್ಳು ಮತ್ತು ಕೊಬ್ಬರಿಯ ಚಿಗಳಿಗಳನು ನೈವೇದ್ಯವಾಗಿರಿಸಿ ಈ ಹಬ್ಬವನ್ನು ಆಚರಿಸುತ್ತಾರೆ.

ಸತತ 3 ದಿನಗಳ ಆಚರಣೆಯ ಈ ಹಬ್ಬಕ್ಕೆ ತಯಾರಿ ಹಲವು ದಿನಗಳದು. ಇಡೀ ಮನೆಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ತೊಳೆದು, ಸುಣ್ಣ–ಕೆಮ್ಮಣ್ಣಿನ ಪಟ್ಟಿ ಬಳಿದು ಹೊಳೆಯುವಂತೆ ಮಾಡುತ್ತಾರೆ.



ಶ್ರಾವಣ ಮಾಸದಲ್ಲಿ ಸೋಮವಾರ, ಮಂಗಳವಾರ, ಶುಕ್ರವಾರಗಳಂದು ರೊಟ್ಟಿ ಮಾಡದೆ ಇರುವ ಕಾರಣ, ರೊಟ್ಟಿಯೇ ಮುಖ್ಯವಾದ ಆಹಾರವಾಗಿರುವ ಉತ್ತರ ಕರ್ನಾಟಕದ ಜನರು ಜೋಳದ ಮತ್ತು ಸಜ್ಜೆ ಹಿಟ್ಟಿನ ಎಳ್ಳು ಹಚ್ಚಿದ ರೊಟ್ಟಿಗಳನ್ನು ತಯಾರಿಸಿ ಎತ್ತಿಟ್ಟುಕೊಳ್ಳುತ್ತಾರೆ.

ಹುರಿದ ಶೇಂಗಾ, ಡಾಣಿ, ಗುಳಿಗೆ ಮತ್ತು ಎಳ್ಳಿನ ಉಂಡಿಗಳನ್ನು ತಯಾರಿಸುತ್ತಾರೆ. ಈ ಹಬ್ಬದ ಕುರಿತು ಒಂದು ಗಾದೆಯೇ ಇದೆ. ’ಪಂಚಮಿ ಹಬ್ಬದ ಸಲುವಾಗಿ ಮಗನನ್ನೇ ಮಾರಿ ಹಬ್ಬಕ್ಕೆ ತಯಾರಿ ಮಾಡಿಕೊಂಡ ತಾಯಿ ನಾಗಪ್ಪನಿಗೆ ಹಾಲು ಹಾಕುವಾಗ ಮಗನಿಗಾಗಿ ಆಸೆ ಪಟ್ಟಳಂತೆ’ ಎಂದು. ಅತಿಶಯವೆನಿಸಿದರೂ ಪಂಚಮಿ ಹಬ್ಬ ಕೊಂಚ ದುಬಾರಿಯೇ!

ಚೌತಿಯ ದಿನ ಹುತ್ತದ ನಾಗಕ್ಕೆ ಹಾಲೆರೆದು, ಹಲವು ವಿಧದ ಉಂಡಿಗಳನ್ನು, ಕರಿದ ತಿಂಡಿಗಳನ್ನು ಭೂರಿಭೋಜನದೊಂದಿಗೆ ಹೊಸ ಮದುಮಕ್ಕಳಿಗೆ ಹಬ್ಬದ ಊಟ ಮಾಡಿಸಿ ಹಗ್ಗದ ಜೋಕಾಲಿ ಕಟ್ಟಿ ಆಡುತ್ತಾರೆ. ಕೊಬ್ಬರಿ ಗಿಟುಕಿನಿಂದ ಬುಗುರಿಯನ್ನು ತಯಾರಿಸಿ ಆಡುತ್ತಾರೆ. ಮಧ್ಯಾಹ್ನದ ಊಟದ ನಂತರ ಹಲವು ಗ್ರಾಮೀಣ ಕ್ರೀಡೆಗಳನ್ನು ಆಡುತ್ತ, ಎಲ್ಲರೂ ಹಾಡಿ ನಲಿಯುತ್ತಾರೆ.

ಪಂಚಮಿಯ ದಿನ ಮಣ್ಣಿನಿಂದ ತಯಾರಿಸಿದ ನಾಗಪ್ಪನ ಮೂರ್ತಿಗೆ ಪೂಜೆ ಮಾಡಿ ಕೇದಿಗೆ, ಗೋಧಿಯ ಸಸಿ ಮತ್ತು ಹಂಗನೂಲು ತಯಾರಿಸಿ ಹಾಕುತ್ತಾರೆ.

ಕಾಲ ಎಷ್ಟೇ ಬದಲಾಗಿದ್ದರೂ, ಕೆಲ ಮೂಢನಂಬಿಕೆಗಳನ್ನು ಹೊರತುಪಡಿಸಿ ನಾವೆಲ್ಲರೂ ಸಹ ನಾಗರ ಪಂಚಮಿ ಹಬ್ಬವನ್ನು ಆಚರಿಸುತ್ತಾ ಹಬ್ಬಕ್ಕೆ ಕಳೆ ತರೋಣ. ಮನೆ–ಮನಗಳ ಕೊಳೆ ಕಳೆಯೋಣ.

– **ವೀಣಾ ಹೇಮಂತ್ ಗೌಡ ಪಾಟೀಲ,**
ಮುಂಡರಗಿ.

# 26ರಂದು ಹುಬ್ಬಳ್ಳಿಯಲ್ಲಿ ಬೃಹತ್ ಉದ್ಯೋಗ ಮೇಳ

▶▶ಮೊದಲನೇ ಪುಟದಿಂದ

ವಿಶೇಷ ಚೇತನರ ಸಬಲೀಕರಣ ಕಾರ್ಯದಲ್ಲಿ ತೊಡಗಿದೆ. ವಿಶೇಷ ಚೇತನರು ಘನತೆ ಮತ್ತು ಗೌರವದಿಂದ ಬದುಕಲು ಉತ್ತಮ ವಾತಾವರಣ, ತರಬೇತಿ ನೀಡುವ ಕೆಲಸ ಮಾಡುತ್ತಿದೆ. ಈವರೆಗೆ 8 ಉದ್ಯೋಗ ಮೇಳ ನಡೆಸಲಾಗಿದ್ದು, ಒಟ್ಟು 3294 ಅಭ್ಯರ್ಥಿಗಳು ಭಾಗಿಯಾಗಿದ್ದಾರೆ. 1475 ಜನ ವಿವಿಧ ಕಂಪನಿಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆಯ ಗಂಗಾಧರ ಚಿಕ್ಕಮಠ, ಹರ್ಷ, ಪ್ರವೀಣ, ಶಿವಲಿಂಗಯ್ಯ ಚುಳಕಿಮಠ ಉಪಸ್ಥಿತರಿದ್ದರು.

# ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

▶▶ಮೊದಲನೇ ಪುಟದಿಂದ


ಶಾಲೆ, ಮುಂಡರಗಿ ಇಲ್ಲಿಗೆ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೌಲಾನಾ ಆಜಾದ್ ಭವನ, ಜಿಲ್ಲಾ ನ್ಯಾಯಾಲಯದ ಎದುರುಗಡೆ , ಹುಬ್ಬಳ್ಳಿ ರಸ್ತೆ, ಗದಗ ಫೋನ್ ನಂ. 08372-297494 ಸಂಪರ್ಕಿಸಬಹುದಾಗಿದೆ.

# 'ವಚನ ತತ್ವಾನುಭವ' ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಭಾನುವಾರ ನಡೆಯಲಿರುವ ಬಸವದಳದ 1555ನೇ ಶರಣ ಸಂಗಮದಲ್ಲಿ ಬಸವಾದಿ ಶಿವಶರಣರ 'ವಚನ ತತ್ವಾನುಭವ' ಹಾಗೂ '856ನೇ ಬಸವ ಪಂಚಮಿ' ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಗದಗ-ಬೆಟಗೇರಿ ಬಸವದಳದ ಅಧ್ಯಕ್ಷ ಶರಣ ವಿ.ಕೆ ಕರೇಗೌಡ್ರ ವಹಿಸುವರು. ಶರಣೆ ರೇಣುಕಾ ಕರೇಗೌಡ್ರ ಇವರು ವಚನ ಚಿಂತನೆಯನ್ನು ಮಾಡುವರು. ಶರಣೆ ಮಂಗಳಕ್ಕ ಬಿ. ಕಾಮಣ್ಣವರ ಇವರು ಉಪನ್ಯಾಸ ಮಾಡುವರು.



ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

ನಗರದ ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್‌ನಲ್ಲಿ 'ಆ್ಯಂಟಿ ರ್‍ಯಾಗಿಂಗ್ ವೀಕ್' ಕಾರ್ಯಕ್ರಮ ನಡೆಸಿ, ಕಾಲೇಜಿನ ಪ್ರಾಚಾರ್ಯೆ ಮೀನಾಕ್ಷಿ ದೇವಾಂಗಮಠ ಪ್ರೆಸೆಂಟೇಶನ್ ಮೂಲಕ ರ್‍ಯಾಗಿಂಗ್‌ನ ಪರಿಣಾಮಗಳ ಬಗ್ಗೆ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ರಶ್ಮಿ ಡಿ.ಎಚ್, ಕವಿತಾ ಪವಾರ, ರಾಧಾ ಗುಜ್ಜರ, 2ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಶೌರ್ಯ ಪ್ರಶಸ್ತಿ, ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

6 ರಿಂದ 18 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣ ರಕ್ಷಣೆಗಾಗಿ ಧೈರ್ಯ, ಸಾಹಸ, ಪ್ರದರ್ಶಿಸಿದ ಬಾಲಕನಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಪ್ರಶಸ್ತಿಯನ್ನು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಪ್ರಕರಣವು 01.08.2022 ರಿಂದ 31.07.2023ರೊಳಗೆ ನಡೆದಿರಬೇಕು. ದಿನಾಂಕ:01.08.2005ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ.10,000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ ರೂ.25,000/- ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ಸಂಸ್ಥೆಗಳಿಗೆ ತಲಾ ರೂ.1,00,000/- ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು.

ಅರ್ಜಿಗಳನ್ನು ಪಡೆದು ಸೆಪ್ಟೆಂಬರ್ 5 ರೊಳಗಾಗಿ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಕೊಠಡಿ ಸಂ.006, ಜಿಲ್ಲಾ ಆಡಳಿತ ಭವನ ಗದಗ (ದೂರವಾಣಿ ಸಂ.08372-220711) ಇಲ್ಲಿ ಕಚೇರಿ ಸಮಯದಲ್ಲಿ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ.

# ಅಪರಿಚಿತ ವ್ಯಕ್ತಿಯ ಶವ ಪತ್ತೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ರೈಲ್ವೆ ನಿಲ್ದಾಣದ ಎರಡನೇ ಪ್ಲಾಟ್ ಫಾರಂನಲ್ಲಿ ಯಾವುದೋ ಖಾಯಿಲೆಯಿಂದ ಬಳಲಿ ಮೃತಪಟ್ಟ ಒಬ್ಬ ಅಪರಿಚಿತ ವ್ಯಕ್ತಿಯ ಶವ ಆಗಸ್ಟ್ 18ರಂದು ಪತ್ತೆಯಾಗಿದ್ದು, ಮೃತ ವ್ಯಕ್ತಿಯು ಅಂದಾಜು 35-40 ವಯಸ್ಸಿನವನಾಗಿದ್ದಾನೆ. ಈ ಸಂಬಂಧ ಗದಗ ರೇಲ್ವೆ ಪೊಲೀಸ್ ಠಾಣೆ ಯುಡಿಆರ್ ನಂ. 46/2023, ಕಲಂ 174 ಸಿಆರ್‌ಪಿಸಿ ಪ್ರಕರಣ ದಾಖಲಾಗಿದೆ.

**ಚಹರೆ:** 35-40 ವರ್ಷ, ಕಪ್ಪು ಮೈಬಣ್ಣ, ದುಂಡು ಮುಖ, ಅಗಲವಾದ ಹಣೆ, ಸದೃಡ ಮೈಕಟ್ಟು, ಉದ್ದನೆಯ ಮೂಗು, ತಲೆಯಲ್ಲಿ ಸುಮಾರು 4-5 ಇಂಚು ಕಪ್ಪು ಕುದಲು, 2 ಇಂಚು ಮೀಸೆ, 2 ಇಂಚು ಗಡ್ಡವನ್ನು ಬಿಟ್ಟಿರುತ್ತಾನೆ. ಬಲ ಮುಂಗೈಯಲ್ಲಿ ಬಿಳಿ ದಾರ ಕಟ್ಟಿರುತ್ತಾನೆ. ಎಡ ಮುಂಗೈ ಮೇಲೆ ಓಖ ಅಂತಾ ಹಚ್ಚೆ ಹಾಕಿಸಿರುತ್ತಾನೆ. ಎಡಗೈ ಮುಂಗೈ ಮೇಲೆ ರೇಣುಕಾ ಯಲ್ಲಮ್ಮ ದೇವಿಯ ಚಿತ್ರದ ಹಚ್ಚೆಯಿದೆ.

ಬಟ್ಟೆ ಬರೆಗಳ ವಿವರ: ಮೃತನ ಮೈಮೇಲೆ ಬೂದು ಬಣ್ಣದ ಗಲೀಜಾದ ಟೀ ಶರ್ಟ್, ಕಪ್ಪು ಬಣ್ಣದ ಫುಲ್ ಪ್ಯಾಂಟ್, ನಡದಲ್ಲಿ ಕೆಂಪು/ಬಿಳಿ ಉಡದಾರ ಕಟ್ಟಿರುತ್ತಾನೆ. ಮೃತನು ಅಪರಿಚಿತನಾಗಿದ್ದು, ಯಾರಿಗಾದರೂ ಈ ಚಹರೆಯ ವ್ಯಕ್ತಿಯ ವಾರಸುದಾರರ ವಿವರಗಳು ತಿಳಿದುಬಂದರೆ, ಗದಗ ರೈಲ್ವೇ ಪೊಲೀಸ್ ಠಾಣೆಯ ದೂರವಾಣಿ ನಂ.08372-278744 ಅಥವಾ ಮೊ.ನಂ 9480802128, Email: gadagrly@ksp.gov.in ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ- 080-22871291 ಇಲ್ಲಿಗೆ ತಿಳಿಸಲು ವಿನಂತಿಸಿದೆ.

ಗಜೇಂದ್ರಗಡ ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ ಮುಂದಾಳತ್ವದಲ್ಲಿ ಸಭೆ

# ಸಂತೆ ವಿವಾದಕ್ಕೆ ತಾತ್ಕಾಲಿಕ ಬ್ರೇಕ್

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಂತೆ ಸ್ಥಳದ ವಿವಾದ ಸಂಪೂರ್ಣ ಸೌಹಾರ್ದಯುತವಾಗಿ ಬಗೆಹರಿಸಲು ಆಡಳಿತ ಸಿದ್ಧತೆ ನಡೆಸಿದೆ. ಸಂತೆ ನಡೆಸಲು ಪಟ್ಟಣದಲ್ಲಿ ಮೂರು ಜಾಗೆಗಳಿದ್ದು, ಎಲ್ಲರ ಅಭಿಪ್ರಾಯ ಪಡೆದು ಸೂಕ್ತವಾದ ಸ್ಥಳವನ್ನು ಇನ್ನೊಂದು ವಾರದಲೊಗೆ ನಿಗದಿ ಮಾಡಲಾಗುವುದು. ಹಾಗಾಗಿ ಈ ಸಾರೆಯ ಸೋಮವಾರದ ಸಂತೆಯು ಅಬ್ಬಿಗೆರೆ ರಸ್ತೆಯಲ್ಲಿಯೇ ನಡೆಯಲಿದೆ ಎಂದು ಗಜೇಂದ್ರಗಡ ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ ಹೇಳಿದರು.



ಪ ಪಂ ಆವರಣದಲ್ಲಿ ಸಂತೆಯ ಸ್ಥಳ ನಿಗದಿಗಾಗಿ ಶನಿವಾರ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಈ ಘೋಷಣೆಯನ್ನು ಮಾಡಿದರು.

ಮುಖ್ಯಾಧಿಕಾರಿ ಶಿವಾನಂದ ಅಜ್ಜಣ್ಣವರ ಮಾತನಾಡಿ, ಸಭೆಯನ್ನು ಅಬ್ಬಿಗೆರೆ ರಸ್ತೆಯಲ್ಲಿ ನಡೆಸಬೇಕೆಂದು ಪರ ಮತ್ತು ವಿರೋಧ ಪತ್ರಗಳು ಬಂದಿವೆ.

ಈ ಹಿನ್ನೆಲೆಯಲ್ಲಿ ನಾವು ಪರ ಮತ್ತು ವಿರೋಧ ಇರುವವರನ್ನು ಕರೆದು ಮಾತನಾಡಲು ಈ ಸಭೆ ಏರ್ಪಡಿಸಿದ್ದೇವೆ ಎನ್ನುತ್ತಲೇ ಸಭೆಯಲ್ಲಿ ಗದ್ದಲ ಶುರುವಾಯಿತು.

ಸೀಮಿತ ಜನರನ್ನಷ್ಟೇ ಕರೆದು ಸಭೆ ನಡೆಸಿದರೆ ಪ್ರಯೋಜನವಿಲ್ಲ. ಏನೇ ಬದಲಾವಣೆ ಯಾಗಬೇಕಾದರೂ ಎಲ್ಲರ ಅಭಿಪ್ರಾಯವನ್ನು ಪಡೆದು, ಎಲ್ಲರಿಗೂ ಅನುಕೂಲವಾಗುವಂತೆ ಬದಲಾವಣೆ ಮಾಡಬೇಕೆಂದು ಸಾರ್ವಜನಿಕರು ಮುಖ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಪ ಪಂ ಆಡಳಿತಾಧಿಕಾರಿಯೂ ಆಗಿರುವ ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ ಎಲ್ಲರನ್ನೂ ಸಮಾಧಾನಪಡಿಸಿ, ಕಳೆದ ವಾರ ನಡೆದ ಸ್ಥಳದಲ್ಲಿಯೆ ಇದೊಂದು ವಾರ ಸಂತೆ ಜರುಗಲಿ.

ಆಗಸ್ಟ್ 28ರ ಸಂತೆ ಎಲ್ಲಿ ನಡೆಯಬೇಕೆಂಬುದರ ಬಗ್ಗೆ ಆಡಳಿತ ನಿರ್ದಿಷ್ಟವಾಗಿ ನಿರ್ಧರಿಸಿ ಎಲ್ಲ ವಿವರಗಳನ್ನೂ ನೀಡುತ್ತದೆ.

ಈ ನಡುವೆ ಜಿಲ್ಲಾ ಮಟ್ಟದಲ್ಲಿ ಅನೇಕ ಸಭೆಗಳಿದ್ದುದರಿಂದ ಈ ವಿಚಾರವಾಗಿ ಸಭೆ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳಿದಾಗ ಅದಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸಂತೋಷ ಹನುಮಸಾಗರ, ಶರಣಪ್ಪ ಧರ್ಮಾಯತ, ಶೇಕಪ್ಪ ಕೆಂಗಾರ, ಮಂಜು ಕಮಲಾಪುರ, ರವಿ ಮುಗಳಿ, ಮೈಲಾರಪ್ಪ ಗೋಡಿ, ಶ್ಯಾಮಣ್ಣ ಹನುಮಸಾಗರ, ಕಲ್ಲಪ್ಪ ಮುಳಗುಂದ, ಮೈಲಾರಪ್ಪ ಚಳ್ಳಮರದ, ರಮೇಶ ಕೋಲಕಾರ, ಮುತ್ತಪ್ಪ ಹಡಪದ, ಸದ್ದಾಂ ನಶೇಖಾನ, ಸಂತೋಷ ಮಣ್ಣೊಡ್ಡರ ಇನ್ನೂ ಮುಂತಾದವರಿದ್ದರು. ಪಿಎಸ್‌ಐ ನಿಖಿಲ್ ಅವರ ಮಾರ್ಗದರ್ಶನದಲ್ಲಿ ಎಎಸ್‌ಐ ಹೊಸಳ್ಳಿ ಮತ್ತು ಸಿಬ್ಬಂದಿಯವರು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

ಸಭೆ ಮುಗಿಸಿ ತಹಸೀಲ್ದಾರರು ಕಚೇರಿಯೊಳಗೆ ಬರುತ್ತಲೇ, ಮಾಜಿ ಅಧ್ಯಕ್ಷರಾದ ಕಲ್ಮೇಶ ತೊಂಡಿಹಾಳ, ಶರಣಪ್ಪ ಕಲಾಬಂಡಿ, ಮಾಜಿ ಸದಸ್ಯರಾದ ಶಶಿಧರ ಸಂಕನಗೌಡ್ರ, ವೀರಣ್ಣ ಗುಜಮಾಗಡಿ, ರಾಜು ಅಣ್ಣಿಗೇರಿ ನೇತೃತ್ವದಲ್ಲಿ ಆಗಮಿಸಿದ ಸಾರ್ವಜನಿಕರು, ಯಾವುದೇ ಕಾರಣಕ್ಕೂ ಸಂತೆಯನ್ನು ಸ್ಥಳಾಂತರ ಮಾಡಬೇಡಿ. ಕಳೆದ 115 ವರ್ಷಗಳಿಂದ ಸಂತೆ ನಡೆಯುತ್ತಿರುವ ಸ್ಥಳದಲ್ಲಿಯೇ ಸಂತೆಯನ್ನು ಮುಂದುವರೆಸಿ. ಅಬ್ಬಿಗೆರೆ ರಸ್ತೆಯಲ್ಲಿ ಸಂತೆ ನಡೆಸುವದರಿಂದ ಶಾಲಾ-ಕಾಲೇಜು ಮಕ್ಕಳಿಗೆ ತೀವ್ರ ಸಮಸ್ಯೆಯಾಗುತ್ತದೆ. ನಿಮಗೆ ಬೇಕಾದ ಎಲ್ಲ ಅನುಕೂಲತೆಗಳನ್ನೂ ನಾವು ಮಾಡಿಕೊಡುತ್ತೇವೆ ಎಂದು ತಹಸೀಲ್ದಾರರಿಗೆ ಭರವಸೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಸೀಲ್ದಾರರು, 115 ವರ್ಷಗಳಿಂದಲೂ ಅಲ್ಲಿ ಸಂತೆ ನಡೆದಿದೆ ಎಂಬ ವಿಷಯ ಗಮನದಲ್ಲಿದೆ. ಆದರೆ ಆ ಜಾಗೆ ತುಂಬಾ ಇಕ್ಕಟ್ಟಿನ ಜಾಗೆಯಾಗಿದೆ. ದಿನಗಳು ಕಳೆದಂತೆ ನಾವೂ ಸಹ ಬದಲಾವಣೆಗೆ ಹೊಂದಿಕೊಳ್ಳಬೇಕಿದೆ ಎಂದರು.

# ತಂಬಾಕು ನಿಯಂತ್ರಣ ಜಾಗೃತಿ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಜಿಲ್ಲಾ ಸಮೀಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ತಂಬಾಕು ನಿಯಂತ್ರಣಾಧಿಕಾರಿಗಳ ವತಿಯಿಂದ ಶನಿವಾರ ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಮಾತನಾಡಿದ ತಹಸೀಲ್ದಾರ ಅನಿಲ ಬಡಿಗೇರ, ಜಿಲ್ಲಾ ತಂಬಾಕು ನಿಯಂತ್ರಣಾ ಕೋಶದ ಸಲಹೆಗಾರ ಗೋಪಾಲ ಹೊಸೂರ, ಪ್ರತಿ ವರ್ಷ ವಿಶ್ವದಾದ್ಯಂತ 60 ಲಕ್ಷಕ್ಕಿಂತ ಹೆಚ್ಚು ಜನರು ತಂಬಾಕು ಸೇವನೆಯಿಂದ ಉಂಟಾಗುವ ಕಾಯಿಲೆಗಳಿಂದ ಸಾವನ್ನಪ್ಪುತ್ತಿದ್ದಾರೆ. ತಂಬಾಕು ಉತ್ಪನ್ನ ಬಳಕೆಯಲ್ಲಿ ಶೇ.6ರಷ್ಟು ಕಡಿಮೆಯಾಗಿದೆ, ದೇಶದಲ್ಲಿ ಶೇ.26.5ರಷ್ಟು ತಂಬಾಕು ವ್ಯಸನಿಗಳಿದ್ದಾರೆ. ರಾಜ್ಯದಲ್ಲಿ ಶೇ.22.8ರಷ್ಟು ವ್ಯಕ್ತಿಗಳು ಯಾವುದಾದರೂ ವಿಧದ ತಂಬಾಕು ಉತ್ಪನ್ನಗಳನ್ನು ಸೇವನೆ ಮಾಡುತ್ತಾರೆ. ಈ ಬಗ್ಗೆ ತಂಬಾಕು ಉತ್ಪನ್ನಗಳ ನಿಯಂತ್ರಣ ಕಾಯ್ದೆ ಜಾರಿಯಲ್ಲಿರುವದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಹಾಗೂ ಧೂಮಪಾನ ನಿಷೇಧಿತ ಪ್ರದೇಶ ನಾಮಫಲಕವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕು.

ಕಿರಾಣಿ ಮತ್ತು ಚಿಲ್ಲರೆ ಅಂಗಡಿಯವರು ಧೂಮಪಾನ ಉತ್ತೇಜಿಸುವ ವಸ್ತುಗಳನ್ನು ತಮ್ಮ ತಂಬಾಕು ಮಾರಾಟ ಮಾಡುವ ಅಂಗಡಿಗಳಲ್ಲಿ ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಇಡಬಾರದು. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ತಮ್ಮ ಶಿಕ್ಷಣ ಸಂಸ್ಥೆಯನ್ನು ಸಂಪೂರ್ಣವಾಗಿ ತಂಬಾಕು ಮುಕ್ತವನ್ನಾಗಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಕಾಯ್ದೆಯ ನಾಮಫಲಕವನ್ನು ಸಂಸ್ಥೆಯ ಮುಂದೆ ಬಿತ್ತರಿಸುವುದು ಕಡ್ಡಾಯ. ಇಂತಹ ನಿಯಮಗಳನ್ನು ಎಲ್ಲರೂ ತಮ್ಮ ಆದ್ಯ ಕರ್ತವ್ಯವೆಂದು ಪರಿಗಣಿಸಿ ಕಡ್ಡಾಯವಾಗಿ ಪಾಲಿಸಬೇಕು.

ಈ ನಿಯಮಗಳು ಉಲ್ಲಂಘನೆಯಾದಲ್ಲಿ ಕಾನೂನಾತ್ಮಕ ಕ್ರಮ, ದಂಡ ಹಾಗೂ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಬಿ.ಎನ್ ಯಳವತ್ತಿ, ಟಿಎಚ್‌ಇಓ ಜಗದೀಶ ಕೋಡಿಹಳ್ಳಿ, ಈರಮ್ಮ ಗೊಡಚಪ್ಪನವರ, ಬಿಆರ್‌ಸಿ ಎನ್.ಎಂ ಸಾವಿರಕುರಿ ಉಪಸ್ಥಿತರಿದ್ದರು.

# ಡಾ. ದ ರಾ ಬೇಂದ್ರೆ ಭವನ ಅಭಿವೃದ್ಧಿಗೆ ಮನವಿ




■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿಯಲ್ಲಿರುವ ವರಕವಿ ಡಾ. ದ ರಾ ಬೇಂದ್ರೆ ಭವನವನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಕೇಂದ್ರವನ್ನಾಗಿ ಮಾಡುವಂತೆ ಒತ್ತಾಯಿಸಿ ಶನಿವಾರ ಕರವೇ ವತಿಯಿಂದ ತಹಸೀಲ್ದಾರರ ಮೂಲಕ ಪ್ರವಾಸೋದ್ಯಮ ಸಚಿವ ಎಚ್ ಕೆ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಹಾಗೂ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರವೇ ತಾಲೂಕಾಧ್ಯಕ್ಷ ಬಸವರಾಜ ವಡವಿ, ಶಿರಹಟ್ಟಿ ಪಟ್ಟಣದ ಮಧ್ಯ ಭಾಗದಲ್ಲಿರುವ ಡಾ. ದ ರಾ ಬೇಂದ್ರೆ ಭವನವು ಅವ್ಯವಸ್ಥೆಯಿಂದ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಬೇಂದ್ರೆ ಭವನದ ಕಂಪೌಂಡ್‌ಗೆ ತಾಲೂಕಾ ಆಡಳಿತವು ಬೀಗ ಜಡಿದಿರುವುದು ಸಾಹಿತ್ಯಾಸಕ್ತರಲ್ಲಿ ಬೇಸರ ಮೂಡಿಸಿದೆ.

ಸುಂದರ ಪ್ರವಾಸಿ ತಾಣವಾಗಬೇಕಿದ್ದ ಬೇಂದ್ರ ಭವನದ ದುಃಸ್ಥಿತಿಗೆ ಕನ್ನಡಿಗರು ತಲೆತಗ್ಗಿಸುವಂತಾಗಿದೆ. ವಿಶೇಷ ಅನುದಾನದಡಿಯಲ್ಲಿ ಭವನವನ್ನು ಅಭಿವೃದ್ಧಿಪಡಿಸಿ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಸುಂದರ ಪ್ರವಾಸಿ ತಾಣವನ್ನಾಗಿಸಬೇಕೆಂದರು.

ದೇವೇಂದ್ರ ಶಿಂಧೆ, ನೂರಅಹ್ಮದ ಮುಳಗುಂದ, ನೂರಲ್ಲಾಶಾ ಮಕಾನದಾರ, ಇಂತಿಯಾಜ ಪಟವೇಗಾರ, ಸಮೀರ ಅತ್ತಾರ, ಉಸಮಾ ಮಾಗಡಿ, ಅನ್ವರ ಭಾರದ್ವಾ ಉಪಸ್ಥಿತರಿದ್ದರು.

# ಪಂ. ಪುಟ್ಟರಾಜ ರೈತ ಸಂಘದಿಂದ ಸಾಧಕರಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಹರಿಯಾಣದ ಕುರುಕ್ಷೇತ್ರದಲ್ಲಿ ನಡೆದ 24ನೇ ಸೀನಿಯರ್ ಸ್ಕ್ವ್ಯಾಯ್ ಚಾಂಪಾಯಿನಶಿಪ್‌ನಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನದೊಂದಿಗೆ ಕರ್ನಾಟಕಕ್ಕೆ ಬೆಳ್ಳಿ ಪದಕವನ್ನು ತಂದುಕೊಟ್ಟ ಐಶ್ವರ್ಯ ಬಿ.ಸತ್ಯಪ್ಪನಮಠ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಆಯ್ಕೆಯಾದ ಅಭಿಯಾ ಬಾವಿಕಟ್ಟಿ ಇವರನ್ನು ಕರ್ನಾಟಕ ರಾಜ್ಯ ಪಂ. ಪುಟ್ಟರಾಜ ರೈತ ಸಂಘದ ವತಿಯಿಂದ ಸಂಘದ ಅಧ್ಯಕ್ಷ ಎಂ.ಪಿ ಮುಳಗುಂದ, ಬಸವರಾಜ ಬೆಳದಡಿ, ನಗರಸಭಾ ಮಾಜಿ ಸದಸ್ಯ ಎಮ್. ಎಸ್ ಪರ್ವತಗೌಡ್ರ ಸನ್ಮಾನಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎ.ಎಚ್ ಹೊಸಳ್ಳಿ, ಯೂಸುಫ್ ಕೊಟ್ಟೂರ, ಜ್ಯೋತಿ ಕುಲಕರ್ಣಿ, ದಾವಲಸಾಬ ನಾಗನೂರ, ಇಬ್ರಾಹೀಂಸಾಬ ಖಾಟಪೂರ, ಮಂಜುನಾಥ ನಾಗನೂರ, ಮೌಲಾಸಾಬ ಬಾವಿಕಟ್ಟಿ, ಅರ್ಜುನ ಬಾಸ್ಕರ, ಬಸವರಾಜ ಸತ್ಯಪ್ಪನಮಠ, ರಾಜು ಸಂಶಿ, ಮಾರ್ಗದರ್ಶಕ ಗೈಬುಸಾಬ ಕಲೇಬಾವಿ ಅಭಿನಂದಿಸಿದರು.

# ಬಾಂಧವ್ಯ ಬೆಸೆವ ಸಂಭ್ರಮದ ರೊಟ್ಟಿ ಪಂಚಮಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಪರಸ್ಪರ ಪ್ರೀತಿ ಬಾಂಧವ್ಯ, ಸ್ನೇಹವನ್ನು ಬೆಸೆಯುವ ಉತ್ತರ ಕರ್ನಾಟಕದ ಸಂಪ್ರದಾಯದದಂತೆ, ನಾಗರ ಪಂಚಮಿ ಮುನ್ನಾ ದಿನ ರೊಟ್ಟಿ ಪಂಚಮಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.



ಮಹಿಳೆಯರು, ಮಕ್ಕಳು ತಮ್ಮ ಓಣಿಯ ಸ್ನೇಹಿತರು, ಗ್ರಾಮದಲ್ಲಿಯ ಸಂಬಂಧಿಕರ ಮನೆ-ಮನೆಗೆ ತೆರಳಿ, ರೊಟ್ಟಿಯನ್ನು ಹಂಚಿ ಸ್ನೇಹ, ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗಳಿಸಿಕೊಂಡರು. ಸಜ್ಜೆ, ಜೋಳದ ರೊಟ್ಟಿ, ವಿವಿಧ ತರಕಾರಿ ಪಲ್ಯೆ, ಮಡಿಕೆ ಕಾಳು, ಹೆಸರು ಕಾಳು, ಬದನೆಕಾಯಿ ಪಲ್ಯೆ, ಶೇಂಗಾ ಚಟ್ನಿ, ಅಗಸಿ ಚಟ್ನಿ, ಕೆಂಪಡಿ ಖಾರ ಸೇರಿದಂತೆ ಉತ್ತರ ಕರ್ನಾಟಕದ ಜವಾರಿ ಆಹಾರವನ್ನು ರೊಟ್ಟಿಯಲ್ಲಿ ಸೇರಿಸಿ ಹಂಚಿದರು.

ಮುಂಗಾರು ಮಳೆ ಅನ್ನದಾತನಿಗೆ ಅನುಕೂಲವಾಗುವಷ್ಟು ಸುರಿದು, ಭೂಮಿಯಲ್ಲಿ ಉತ್ತಮ ಬೆಳೆ ಬೆಳೆದು, ಉತ್ತಮ ಫಸಲು ಬರಲಿ ಎಂಬ ಹಾರೈಕೆಯೊಂದಿಗೆ ಈ ಹಬ್ಬವನ್ನು ಆಚರಿಸಲಾಗುತ್ತಿದೆ. ಮೂರು ದಿನಗಳ ಕಾಲ ಆಚರಿಸುವ ಪಂಚಮಿ ಹಬ್ಬವನ್ನು ಮಹಿಳೆಯರು ಸಂಭ್ರಮದಿಂದ ಆಚರಿಸುತ್ತಿದ್ದು, ಉತ್ತರ ಕರ್ನಾಟಕದ ಸಂಪ್ರಾಯದಯದ ವಿಶೇಷ ಹಬ್ಬ ಇದಾಗಿದೆ.

# ಫೋಟೋಗ್ರಾಫಿಯಲ್ಲಿ ಕಲ್ಪನಾ ಶಕ್ತಿ ಅಡಗಿದೆ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಫೋಟೋಗ್ರಾಫಿ ಒಂದು ಅದ್ಭುತ ಕಲೆ. ಸಾಕಷ್ಟು ಮೇಧಾವಿಗಳು ಸಂಶೋಧನೆಯಿಂದ ಈ ಕಲೆ ಹುಟ್ಟಿದ್ದು, ಛಾಯಾಚಿತ್ರ ಸೆರೆಹಿಡಿಯುವಲ್ಲಿ ಒಂದು ಕಲ್ಪನಾ ಶಕ್ತಿ ಅಡಗಿರುತ್ತದೆ. ಪ್ರತಿ ಮನೆಯಲ್ಲೂ ಮೊಬೈಲ್ ಬಂದಿದ್ದರೂ ಸಹ ಛಾಯಾಗ್ರಾಹಕರು ತೆಗೆಯುವ ಛಾಯಾಚಿತ್ರಗಳಷ್ಟು ನಿಖರವಾಗಿ, ಸ್ಪಷ್ಟವಾಗಿ ಮೂಡಲು ಸಾಧ್ಯವೇ ಇಲ್ಲ ಎಂದು ಡಾ. ಎಸ್.ಸಿ ಚವಡಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಕಲಾ ಭವನದಲ್ಲಿ 184ನೇ ವಿಶ್ವ ಛಾಯಾಗ್ರಾಹಕರ ದಿನಾಚರಣೆಯಲ್ಲಿ ಲೂಯಿಸ್ ದಾಗ್ವೆರೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಪಟ್ಟಣದ ಹಿರಿಯ ಛಾಯಾಗ್ರಾಹಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಅಧ್ಯಕ್ಷತೆಯನ್ನು ಛಾಯಾಚಿತ್ರಗಾರರ ಸಂಘದ ಅಧ್ಯಕ್ಷ ಚಿಕ್ಕಪ್ಪ ದೇವರಮನಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಂ.ಬಿ ಬಿನ್ನಾಳ, ಬಿ.ಎಲ್ ಜಾಧಾವ, ಛಾಯಾಗ್ರಾಹಕರಾದ ವಿನಾಯಕ ಜಾಧಾವ, ಮಂಜುನಾಥ ಬಟ್ಟೂರ, ಬಸವರಾಜ ಹಂಚಿನಾಳ, ಇಂತಿಯಾಜ ಖಲೀಫನವರ, ಗೌಸ್‌ಮೋದೀನ ಖಲೀಫನವರ, ಶ್ರೀಕಾಂತ ಕುರವಂತಿ, ಭೀಮನಗೌಡ ಪಾಟೀಲ್, ರಫೀಕ್ ಹವಾಲ್ದಾರ, ಮಹದೇವಪ್ಪ ದೇವರೆಡ್ಡಿ, ವಸಂತ ಕಮ್ಮಾರ, ಕಾರ್ತಿಕ ನಂದಿಕೋಲಮಠ ಇದ್ದರು.

# ಸೌಂದರ್ಯ ಲಹರಿ ಬಳಗದಿಂದ ಪಾರಾಯಣ ಮಂಗಲ



■ವಿಜಯಸಾಕ್ಷಿ ಸುದ್ದಿ, ಗದಗ

ಅಧಿಕ ಮಾಸದ ಅಂಗವಾಗಿ ಗದುಗಿನ ಸೌಂದರ್ಯ ಲಹರಿ ಬಳಗವು ನಗರದ ನಂದೀಶ್ವರ ಮಠದ ಆವರಣದಲ್ಲಿ ಕೈಗೊಂಡಿದ್ದ ವಿಷ್ಣು ಸಹಸ್ರನಾಮಾವಳಿ ಹಾಗೂ ಲಲಿತಾ ಸಹಸ್ರನಾಮಾವಳಿ ಪಾರಾಯಣವು ಶುಕ್ರವಾರ ಮಹಾಮಂಗಲಗೊಂಡಿತು.

ಪಂ. ಗಣಪತಿಭಟ್ ಗಾಂವಕರ್ ಅವರ ಮಾರ್ಗದರ್ಶನದಲ್ಲಿ ಸೌಂದರ್ಯ ಲಹರಿ ಬಳಗದ ಸಹೋದರಿಯರು 33 ದಿನಗಳ ಪಾರಾಯಣಗೈದರು. ಶುಕ್ರವಾರ 101 ಮುತ್ತೈದೆಯರಿಗೆ ಉಡಿ ತುಂಬುವ ಮೂಲಕ ಪಾರಾಯಣವು ಮಹಾಮಂಗಲಗೊಂಡಿತು.

ರಾಜೇಶ್ವರಿ ಶೆಟ್ಟರ, ಜಯಶ್ರೀ ಪಾಟೀಲ, ಶಿವಲೀಲಾ ಅಕ್ಕಿ, ರೇಣುಕಾ ಅಮಾತ್ಯ, ಲತಾ ಭರಮಗೌಡ್ರ, ಶಿವಲೀಲಾ ರಬ್ಬನಗೌಡ್ರ, ಶಾರದಾ ಕರಮುಡಿ, ಸುವರ್ಣ ತುಂಬಳ, ಸುನಂದಾ ಹುಂಬಿ, ಸುಷ್ಮಾ ಸಂಕಣ್ಣವರ, ಸುಜಾತಾ ಗುಡಿಮನಿ, ದೀಪಾ ಮುನವಳ್ಳಿ, ಪವಿತ್ರಾ ಬಿರಾದಾರ, ವಿದ್ಯಾ ಮುರಗೋಡ, ಶೋಭಾ ಕಲ್ಲನಗೌಡ್ರ, ಜ್ಯೋತಿ ಹೇಮಾದ್ರಿ, ಜಯಾ ಬಳ್ಳಾರಿ, ನಾಗರತ್ನ ಮಾರನಬಸರಿ, ವಿಜಯಾ ಪಾಟೀಲ, ವೀಣಾ ಮೆಣಸಿನಕಾಯಿ, ವಿಜು ಹಳ್ಳಿಕೇರಿ, ಲಲಿತಕ್ಕ ಮಾತೋಡ, ಸೀತಾ ಕಂದಗಲ್ಲ, ಕುಸುಮಾ ಹಡಗಲಿ, ಲಾವಣ್ಯ, ಗೀತಾ, ವಿದ್ಯಾ ಸೇರಿದಂತೆ ನೂರಾರು ಮುತ್ತೈದೆಯರು ಪಾಲ್ಗೊಂಡಿದ್ದರು.

ಗದಗ-ಬೆಟಗೇರಿ ಲಯನ್ಸ್ ಕ್ಲಬ್‌ನ 'ಸ್ತನ್ಯಪಾನ ಜಾಗೃತಿ' ಕಾರ್ಯಕ್ರಮದಲ್ಲಿ ಡಾ.ಸ್ನೇಹಾ

# ಮಗುವಿಗೆ ಹಾಲುಣಿಸುವದರಿಂದ ಸೌಂದರ್ಯ ವೃದ್ಧಿ



■ವಿಜಯಸಾಕ್ಷಿ ಸುದ್ದಿ, ಗದಗ

ಬಾಣಂತಿಯರು ಮಗುವಿಗೆ ಹಾಲುಣಿಸುವದರಿಂದ ತಾಯಿಯ ಸೌಂದರ್ಯದ ಮೇಲೆ ಪರಿಣಾಮ ಬೀರುವದು ಎಂಬುದು ತಪ್ಪು ಕಲ್ಪನೆ ಎಂದು ಡಾ.ಸ್ನೇಹಾ ಶಶಾಂಕ ಶಿರೋಳ ಹೇಳಿದರು.

ಗದುಗಿನ ಸರಕಾರಿ ಹಿರಿಯ ಪ್ರಾಥಮಿಕ ಮರಾಠಿ ಶಾಲೆಯ ಆವರಣದಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕೇಂದ್ರ ಸಂಖ್ಯೆ 216ರಲ್ಲಿ ಗರ್ಭಿಣಿ ಮಹಿಳೆಯರಿಗೆ ಹಾಗೂ ಬಾಣಂತಿಯರಿಗೆ ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಏರ್ಪಡಿಸಿದ್ದ ಸ್ತನ್ಯಪಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಣಂತಿಯರು ಮಗುವಿಗೆ ಎದೆಹಾಲು ಉಣಿಸಿದಷ್ಟು ಮಗು ಶಸಕ್ತವಾಗಿ, ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳುತ್ತದೆ. ತಾಯಿಯ ಸೌಂದರ್ಯಕ್ಕೆ ತೊಂದರೆ ಇಲ್ಲ. ಬದಲಾಗಿ ಸೌಂದರ್ಯ ವೃದ್ಧಿಸುವದು. ಸತ್ವಯುತ ಆಹಾರ ಸೇವನೆ, ಸರಿಯಾದ ಸಮಯಕ್ಕೆ ವಿಶ್ರಾಂತಿ, ಊಟೋಪಚಾರ ಮಾಡಬೇಕೆಂದರು.

ಲಯನ್ಸ್‌ನ್ಸ್ ಲೇಡಿಸ್ ಕ್ಲಬ್ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ ಮಾತನಾಡಿದರು. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಲಲಿತಾ ಎಸ್ ಅಳವಂಡಿ, ಅಂಗನವಾಡಿ ಮೇಲ್ವಿಚಾರಕಿ ವಿಜಯಲಕ್ಷ್ಮೀ ಗುರುಬಸನಗೌಡ್ರ, ಅಂಗನವಾಡಿ ಕಾರ್ಯಕರ್ತೆ ರತ್ನಾ ಎಲ್. ವಜ್ರೇಶ್ವರಿ, ಅಂಗನವಾಡಿ ಸಹಾಯಕಿ ನೂರಜಾನ್ ಮಕಾನದಾರ, ರಾಜೇಶ್ವರಿ ಕೊಣ್ಣೂರ, ನಿವೇದಿತಾ ಕೊಣ್ಣೂರ, ದೇವಮ್ಮ ಕೋಳಿವಾಡ, ಭಾಗ್ಯಶ್ರೀ ಪಂಪಣ್ಣವರ ಸೇರಿದಂತೆ ಲಯನ್ಸ್ ಲೇಡಿಸ್ ಕ್ಲಬ್ ಕಾರ್ಯದರ್ಶಿ ಅಮೃತಾ ವಾರಕರ, ಖಜಾಂಚಿ ಸುರೇಖಾ ಮಲ್ಲಾಡದ, ವೀಣಾ ಸುಲಾಖೆ, ಅನುರಾಧಾ ಸಾಲಿ, ಅಶ್ವಿನಿ ನೀಲಗುಂದ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ, ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ, ಕ್ಲಬ್‌ನ ಡಿಸ್ಟ್ರಿಕ್ಟ್ ಚೇರ್‌ಪರ್ಸನ್ ಅಶ್ವಥ್ ಸುಲಾಖೆ, ಡಾ.ಜಗದೀಶ ಶಿರೋಳ, ಎಸ್.ಡಿ ಪಾಟೀಲ, ನಿತೀಶ್ ಸಾಲಿ, ರತನ್ ದೇಸಾಯಿ, ಶಿವಪ್ರಭು ನೀಲಗುಂದ, ಪ್ರಕಾಶ ರಾಯ್ಕರ್, ರಾಜು ವೆರ್ಣೆಕರ ಮುಂತಾದವರು ಪಾಲ್ಗೊಂಡಿದ್ದರು.

ಬೀಚಿ ಬಳಗದ ದಶಮಾನೋತ್ಸವದ ಅದ್ದೂರಿ ಆಚರಣೆಗೆ ನಿರ್ಧಾರ

# ಬೀಚಿ ಬಳಗಕ್ಕೆ 10ರ ಸಂಭ್ರಮ




■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಒಂದು ಸಂಸ್ಥೆಯನ್ನು ಕಟ್ಟುವುದು ಸುಲಭ. ಆದರೆ ಅದನ್ನು ಮುನ್ನಡೆಸಿಕೊಂಡು ಹೋಗುವುದು ಕಷ್ಟಕರ ಕೆಲಸ. ಆದರೆ ಇಲ್ಲಿನ ಎಲ್ಲ ಸಾಹಿತ್ಯಾಭಿಮಾನಿಗಳ ಸಹಾಯ, ಸಹಕಾರದಿಂದ ಇಂದು ಬೀಚಿ ಬಳಗವು ದಶಮಾನೋತ್ಸವದ ಹೊಸ್ತಿಲಲ್ಲಿದೆ. ಈ ದಶಮಾನೋತ್ಸವವನ್ನು ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸೋಣ ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ ಕುಲಕರ್ಣಿ ನುಡಿದರು.

ಹಾಸ್ಯ ಬ್ರಹ್ಮ ಬೀಚಿಯವರ ಹೆಸರಿನಲ್ಲಿ ನರೇಗಲ್ಲದಲ್ಲಿ ರಚನೆಗೊಂಡಿರುವ ಬೀಚಿ ಬಳಗವು ಈ ವರ್ಷ ತನ್ನ 10ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಈ ವಿಶೇಷ ಸಂದರ್ಭವನ್ನು ಬೀಚಿ ಸ್ಮರಣೆಯ ದಶಮಾನೋತ್ಸವವನ್ನಾಗಿ ಆಚರಿಸಲು ಕರೆದಿದ್ದ ಸಭೆಯಲ್ಲಿ ಅವರು ಮತನಾಡಿದರು.

ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಮಾತನಾಡಿ, ಈ ಸಮಾರಂಭವು ಅವಿಸ್ಮರಣೀಯ ಸಮಾರಂಭವಾಗಬೇಕು. ಇದನ್ನೊಂದು ಚಿಕ್ಕ ಸಾಹಿತ್ಯ ಸಮ್ಮೇಳನದಂತೆ ಮಾಡಬೇಕು. ಅದಕ್ಕಾಗಿ ಎಲ್ಲರೂ ಒಮ್ಮನದಿಂದ ಶ್ರಮಿಸಿದರೆ ಈ ಕಾರ್ಯ ಮಾಡುವುದು ಸುಲಭವಾಗುತ್ತದೆ ಎಂದರು.

ದಶಮಾನೋತ್ಸವ ಕಾರ್ಯಕ್ರಮವು ಬರುವ ಡಿಸೆಂಬರ್ 10ರಂದು ಸಂಜೆ 4ಕ್ಕೆ ಪ್ರಾರಂಭವಾಗಲಿದ್ದು, ಸಮಾರಂಭಕ್ಕೆ ಹಿರೇಮಗಳೂರು ಕಣ್ಣನ್, ಗಂಗಾವತಿಯ ಬೀಚಿ ಬಿ. ಪ್ರಾಣೇಶ್, ಬಸವರಾಜ ಮಹಾಮನಿ, ನರಸಿಂಹ ಜೋಷಿ, ನಗೆ ಭಾಷಣಗಾರ್ತಿ ನಾಗಶ್ರೀ ತ್ಯಾಗರಾಜನ್, ಗದುಗಿನ ಅನಿಲ ವೈದ್ಯರನ್ನು ಆಹ್ವಾನಿಸಸು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

ಮಾಜಿ ಅಧ್ಯಕ್ಷ ದೊಡ್ಡಯ್ಯ ಅರವಟಗಿಮಠ ಮಾತನಾಡಿ, ಬೀಚಿ ಬಳಗದ ಸದಸ್ಯರಾಗಲು ಎಲ್ಲರಿಗೂ ಮುಕ್ತ ಅವಕಾಶವಿದೆ. ಈಗಲೂ ಸಹ ಸದಸ್ಯರಾಗಬಯಸುವವರು ಅಧ್ಯಕ್ಷರನ್ನು ಅಥವಾ ಬಳಗದ ಯಾವುದೇ ಸದಸ್ಯರನ್ನು ಭೇಟಿಯಾಗಿ ಸದಸ್ಯತ್ವ ಪಡೆದುಕೊಳ್ಳಬಹುದು. ದಶಮಾನೋತ್ಸವದ ಈ ಸಂದರ್ಭದಲ್ಲಿ ಬಳಗದ ಸದಸ್ಯತ್ವವನ್ನು ಹೆಚ್ಚಿಸಲು ಅಧ್ಯಕ್ಷರು ಮತ್ತು ಸದಸ್ಯರು ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಹೇಳಿದರು.

ಮಾಜಿ ಅಧ್ಯಕ್ಷ ಎಸ್.ಸಿ ಗುಳಗಣ್ಣವರ ಮಾತನಾಡಿ, ಕಾರ್ಯಕ್ರಮವನ್ನು ಎಲ್ಲರ ಸಹಕಾರದಿಂದ ಯಶಸ್ವಿಗೊಳಿಸೋಣ ಎಂದರು. ಬಳಗದ ಅಧ್ಯಕ್ಷ ಸುರೇಶ ಹಳ್ಳಿಕೇರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಮಾಜಿ ಅಧ್ಯಕ್ಷರುಗಳಾದ ಡಾ. ಎಸ್.ಜಿ ಗುರಿಕಾರ, ಡಾ. ರಾಜೇಂದ್ರ ಗಚ್ಚಿನಮಠ ಮಾತನಾಡಿ ಅನೇಕ ಸಲಹೆ-ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಸಂಚಾಲಕ ಸಿ.ಕೆ ಕೇಸರಿ, ಕಾರ್ಯದರ್ಶಿ ಜೆ.ವೈ ಪಾಟೀಲ, ಉಪಾಧ್ಯಕ್ಷ ಬಿ.ಟಿ ತಾಳಿ, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್ ಕಳಕಣ್ಣವರ, ಡಾ. ಕಲ್ಲಯ್ಯ ಹಿರೇಮಠ, ಶಿವಯೋಗಿ ಜಕ್ಕಲಿ, ಮುಖ್ಯ ಶಿಕ್ಷಕರಾದ ಎಂ.ವಿ ವೀರಾಪೂರ, ಬಿ.ಬಿ ಕುರಿ, ಭಾರತಿ ಶಿರ್ಸಿ, ನಿರ್ಮಲಾ ಹಿರೇಮಠ, ಉಪನ್ಯಾಸಕ ಜಿ.ಜಿ ಕೋಟಿ ಮುಂತಾದವರು ಉಪಸ್ಥಿತರಿದ್ದರು. ಹುಚ್ಚೀರೇಶ ಈಟಿ ನಿರೂಪಿಸಿ, ವಂದಿಸಿದರು.

ಬೀಚಿ ಬಳಗಕ್ಕೆ ಹಾಲಕೆರೆ ಶ್ರೀಮಠದ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರನ್ನು ಬಳಗದ ಗೌರವಾಧ್ಯಕ್ಷರನ್ನಾಗಿ ಮತ್ತು ಹಿರೇಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಬಳಗವನ್ನು ಮುನ್ನಡೆಸಲು ಸೂಚಿಸಿದಾಗ ಎಲ್ಲರೂ ತಮ್ಮ ಒಪ್ಪಿಗೆಯನ್ನು ನೀಡಿದರು. ಈ ವಿಷಯವನ್ನು ಸ್ವಾಮೀಜಿಗಳ ಗಮನಕ್ಕೆ ತರಲು ಹಿಂದಿನ ಎಲ್ಲ ಅಧ್ಯಕ್ಷರುಗಳಿಗೆ ಸಭೆ ಒಪ್ಪಿಗೆ ನೀಡಿತು. ಸಮಾರಂಭದ ಉದ್ಘಾಟನೆಯನ್ನು ಶಾಸಕ ಜಿ.ಎಸ್ ಪಾಟೀಲರಿಂದ ನೆರವೇರಿಸಲು ನಿರ್ಧರಿಸಲಾಯಿತು.

# ಪೇವರ್ಸ್ ಜೋಡಣೆ ಕಾಮಗಾರಿಗೆ ಚಾಲನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ವಾರ್ಡ್ ನಂ.13ರಲ್ಲಿ ಬರುವ ಗೋಮ್ಸ್ ಬಿಲ್ಡಿಂಗ್‌ನ ಆವರಣದಲ್ಲಿ ನಗರಸಭೆಯ ಅಂದಾಜು 5 ಲಕ್ಷ ರೂ. ಅನುದಾನದಲ್ಲಿ ಪೇವರ್ಸ್ ಜೋಡಣೆ ಕಾಮಗಾರಿಗೆ ನಗರಸಭೆ ಅಧ್ಯಕ್ಷೆ ಉಷಾ ದಾಸರ ಭೂಮಿ ಪೂಜೆಯನ್ನು ನೆರವೇರಿಸಿದರು.

ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಿದ ಸದಸ್ಯ ಮುತ್ತು ಮುಶಿಗೇರಿ ಮಾತನಾಡಿ, ವಾರ್ಡ್ ನಂ.13ರಲ್ಲಿ ಯಾವುದೇ ಮೂಲಭೂತ ಸಮಸ್ಯೆಗಳ ಕುರಿತು ಸಾರ್ವಜನಿಕರು ಯಾವುದೇ ಸಮಯದಲ್ಲಿ ಸಂಪರ್ಕಿಸಿದರೂ ಸೇವೆಗೆ ಸದಾ ಸಿದ್ಧನಿರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕುಮಾರ ಪವನ ಗಂಗಾವತಿ, ವೀರಪ್ಪ ಅಣ್ಣಿಗೌಡರ, ಸ್ಟೇಲಾ ಕೋಳಿವಾಡ, ಸಯ್ಯದ ಇಮಾಮಸಾಬ ಖಾಜಿ, ಲೋರಿ ಕೀಸಿನಾ, ಶ್ರೀನಿವಾಸ ಪೂಜಾರ, ಜಾನ ಜೋಸೆಫ್, ಸುನಂದಾ, ಶಿವಬಸಮ್ಮ, ಮಹಾಂತೇಶ ಜಾಧವ, ಜಯಶ್ರೀ ಜಾಧವ, ರಮೇಶ ಕೋಳಿವಾಡ, ಸುನೀತಾ ಬೇಂದ್ರೆ, ರೇಣುಕಾ ತಿಪ್ಪಣ್ಣವರ ಸೇರಿದಂತೆ ವಾರ್ಡಿನ ಪ್ರಮುಖರು ಉಪಸ್ಥಿತರಿದ್ದರು.

# ಸಿಐಟಿಯು ಪ್ರಚಾರ ಅಭಿಯಾನದ ಭಿತ್ತಿಪತ್ರ ಬಿಡುಗಡೆ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹಮ್ಮಿಕೊಂಡಿರುವ ಅಭಿಯಾನದ ಭಿತ್ತಿಪತ್ರಗಳನ್ನು ಗದಗ ಜಿಲ್ಲಾ ಕಚೇರಿಯ ಆವರಣದಲ್ಲಿ ಬಿಡುಗಡೆ ಮಾಡಲಾಯಿತು. ಈ ಭಿತ್ತಿಪತ್ರಗಳೊಂದಿಗೆ ಆಗಸ್ಟ್ 24ರಂದು ರಾಜ್ಯಾದ್ಯಂತ ಪ್ರತಿ ಜಿಲ್ಲಾ ಕಾಮಿರ್ಕ ಅಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದರು.

ಕಾರ್ಮಿಕರ ಬೇಡಿಕೆಗಳಾದ ಬಾಕಿ ಇರುವ 2021-22ನೇ ಶೈಕ್ಷಣಿಕ ಅರ್ಜಿಗಳಿಗೆ ಕೂಡಲೇ ಹಣ ವರ್ಗಾವಣೆ, ಕಾರ್ಡ್ ನವೀಕರಣಕ್ಕೆ ವೇತನ ಚೀಟಿ ಮತ್ತು ಹಾಜರಾತಿ ಪಟ್ಟಿ ಕಡ್ಡಾಯ ಆದೇಶವನ್ನು ವಾಪಸ್ ಪಡೆಯುವುದು, ಬೋಗಸ್ ಕಾರ್ಡ್ ನಿಯಂತ್ರಿಸಿ ನೈಜ ಕಾರ್ಮಿಕರನ್ನು ಮಾತ್ರ ನೋಂದಣಿ/ನವೀಕರಣ ಮಾಡಬೇಕು. ರಾಜ್ಯ ಸರ್ಕಾರದ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕಟ್ಟಡ ಕಾರ್ಮಿಕರು ಹಾಗೂ ಅವರ ಕುಟುಂಬಗಳಿಗೆ ಜಾರಿಗೊಳಿಸುವುದು, ಹೊಸ ತಂತ್ರಾಂಶವನ್ನು ಕೂಡಲೇ ಆರಂಭಿಸಿ ಕಾರ್ಮಿಕ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಿ ನಕಲಿ ಕಾರ್ಡುಗಳನ್ನು ನಿಯಂತ್ರಿಸುವುದು, ಜೀವಿತಾವಧಿ ಪ್ರಮಾಣಪತ್ರವನ್ನು ಕಂದಾಯ ಇಲಾಖೆಯ ಬದಲಾಗಿ ಕಾರ್ಮಿಕ ಇಲಾಖೆಯೇ ನೀಡಬೇಕು, ಅರ್ಜಿಗಳ ವಿಲೇವಾರಿ ವಿಳಂಬ ತಡೆಗಟ್ಟಿ, ಕಾರ್ಮಿಕ ಇಲಾಖೆಯಲ್ಲಿ ಇರುವ ಭ್ರಷ್ಟ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು, ಮನೆ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ಸಹಾಯಧನ ನೀಡಬೇಕು ಇತ್ಯಾದಿ ಬೇಡಿಕೆಗಳ ಭಿತ್ತಿಪತ್ರಗಳನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಮುತ್ತಪ್ಪ ಚಲವಾದಿ, ಪ್ರಧಾನ ಕಾರ್ಯದರ್ಶಿ ಮಾರುತಿ ಚಿಟಗಿ, ಜಿಲ್ಲಾ ಮುಖಂಡ ಬಲರಾಮರಾಜು, ಹನಮಂತ ಮಲ್ಲಾಡದ, ಶಿವರಾಜ ವಸ್ತ್ರದ, ಪಕೀರೇಶ ಹುಳ್ಯಾಳ, ನಿಂಗಪ್ಪ ವಡ್ಡರ, ಸುಶೀಲಾ ಚಲವಾದಿ, ವಿನಾಯಕ ಪವಾರ ಪಾಲ್ಗೊಂಡಿದ್ದರು.

# ಉದ್ಯಾನವನದಲ್ಲಿ ಇಂದು ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಆ. 20 ರಂದು ರವಿವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಕು.ರೇಣುಕಾ ಎಸ್. ಬೇಲೇರಿರವರಿಂದ "ಸುಗಮ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಕು.ಭರತ ಟಿ ದರೋಜಿ ಇವರಿಂದ "ಶಾಸ್ತ್ರೀಯ ಸಂಗೀತ" ಸಾಯಂಕಾಲ: 5.30 ರಿಂದ6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಶ್ರೀಮತಿ ಸಾವಿತ್ರಿ ಎಂ .ಲಮಾಣಿ ಇವರಿಂದ "ಜಾನಪದ/ಭಾವಗೀತೆಗಳ" ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂಡರಗಿ ತಾಲೂಕಿನ ಸ್ಥಿರಾಸ್ತಿಗಳ ಬೆಲೆ ಪರಿಷ್ಕರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಿನ ಸ್ಥಿರಾಸ್ತಿಗಳ ಬೆಲೆಯನ್ನು 2023-24ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳ ಪ್ರಕಾರ 2023-24ನೇ ಸಾಲಿಗೆ ಪರಿಷ್ಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕರಡು ಪ್ರತಿಯನ್ನು ಮುಂಡರಗಿಯ ಉಪನೋಂದಣಿ ಅಧಿಕಾರಿಗಳ ಕಚೇರಿ, ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕ ಸಲಹೆ, ಸೂಚನೆ ಮತ್ತು ಅಕ್ಷೇಪಣೆಗಳು ಇದ್ದಲ್ಲಿ ಸಂಬಂಧಪಟ್ಟವರು ಸೂಕ್ತ ದಾಖಲೆಗಳೊಂದಿಗೆ ಸೆಪ್ಟೆಂಬರ್ 3 ರೊಳಗಾಗಿ ಮುಂಡರಗಿ ಉಪ ನೋಂದಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಮುಂಡರಗಿಯ ಮಾರ್ಗಸೂಚಿ ಬೆಲೆ ಮೌಲ್ಯಮಾಪನ ಉಪ ಸಮಿತಿಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುತೂಹಲ ಮೂಡಿಸಿದ ಕಾಂತೇಶ ಈಶ್ವರಪ್ಪ ಭೇಟಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಾಜಿ ಉಪಮುಖ್ಯಮಂತ್ರಿ, ಬಿಜೆಪಿ ಹಿರಿಯ ಮುಖಂಡ ಕೆ.ಎಸ್ ಈಶ್ವರಪ್ಪನವರ ಪುತ್ರ ಕಾಂತೇಶ ಅವರು ಶುಕ್ರವಾರ ಪಟ್ಟಣಕ್ಕೆ ಆಗಮಿಸಿ ಪಕ್ಷದ ಮುಖಂಡರನ್ನು ಭೇಟಿ ಮಾಡಿ ಚರ್ಚಿಸಿದರು. ಕಾಂತೇಶ ಈಶ್ವರಪ್ಪ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗುವ ವದಂತಿಗಳ ಹಿನ್ನೆಲೆಯಲ್ಲಿ ಅವರ ಭೇಟಿ ಕುತೂಹಲ ಮೂಡಿಸಿದ್ದು, ವದಂತಿಗೆ ಮತ್ತಷ್ಟು ಪುಷ್ಟಿ ನೀಡಿದಂತಾಗಿದೆ.

ಶುಕ್ರವಾರ ಪಟ್ಟಣಕ್ಕೆ ಆಗಮಿಸಿದ ಅವರನ್ನು ನೂರಾರು ಕಾರ್ಯಕರ್ತರು ಸ್ವಾಗತಿಸಿದರು. ಪಕ್ಷದ ಹಿರಿಯ ಮುಖಂಡ ಹಾಗೂ ಮಾಜಿ ಶಾಸಕ ಗಂಗಣ್ಣ ಮಹಾಂತಶೆಟ್ಟರ ಅವರ ನಿವಾಸಕ್ಕೆ ತೆರಳಿ, ಅವರ ಆಶೀರ್ವಾದ ಪಡೆದು,, ಅವರೊಂದಿಗೆ ಚರ್ಚೆ ನಡೆಸಿದರು. ನಂತರ ಹಿರಿಯ ಮುಖಂಡ ಬಸವರಾಜ ಹತ್ತಿಕಾಳ ಅವರ ನಿವಾಸಕ್ಕೂ ತೆರಳಿ ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಾವೇರಿ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಕಾರ್ಯಕರ್ತರ ಒತ್ತಡವಿದೆ. ಅವಕಾಶ ದೊರಕಿದಲ್ಲಿ ಸ್ಪರ್ಧೆ ಮಾಡುವ ವಿಚಾರವಿದೆ. ಮೋದಿಯವರು ಮತ್ತೆ ಈ ದೇಶದ ಪ್ರಧಾನಿಯಾಗಬೇಕೆಂದು ಬಹುತೇಕ ಜನರ ಇಚ್ಛೆಯಾಗಿದೆ. ಹಾವೇರಿ ಕ್ಷೇತ್ರಕ್ಕೆ ಸ್ಪರ್ಧಿಸುವ ಅವಕಾಶ ದೊರೆಯುವ ಭರವಸೆಯಿದೆ. ಇದೀಗ ಪಕ್ಷದ ಮುಖಂಡರನ್ನು, ಕಾರ್ಯಕರ್ತರನ್ನು ಭೇಟಿ ಮಾಡಿ ಸಹಕಾರ ಕೋರುತ್ತಿದ್ದೇನೆ. ಅವಕಾಶ ದೊರೆತರೆ ಸ್ಪರ್ಧಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಸವರಾಜ ಪಲ್ಲೇದ, ಸುನೀಲ ಮಹಾಂತಶೆಟ್ಟರ, ವಿಜಯಕುಮಾರ ಹತ್ತಿಕಾಳ, ನಿಂಗಪ್ಪ ಬನ್ನಿ, ಪರಶುರಾಮ ಇಮ್ಮಡಿ, ಡಿ.ವೈ ಹುನಗುಂದ, ನಿಂಬಣ್ಣ ಮಡಿವಾಳದ, ಗಂಗಾಧರ ಮೆಣಸಿನಕಾಯಿ, ದುಂಡೇಶ ಕೊಟಗಿ, ಬೀಮಣ್ಣ ಯಂಗಾಡಿ, ಬಸವರಾಜ ಕಲ್ಲೂರ, ಹಾಲಪ್ಪ ಸೂರಣಗಿ, ರಮೇಶ ಹಾಳದೋಟದ ಸೇರಿದಂತೆ ಅನೇಕರಿದ್ದರು.

# ವಿಧಿ-ವಿಧಾನಗಳೊಂದಿಗೆ ಕೋತಿಯ ಅಂತ್ಯಕ್ರಿಯೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಗ್ರಾಮದಲ್ಲಿ ಯಾರೇ ವ್ಯಕ್ತಿಗಳು ರಾತ್ರಿ ವೇಳೆ ಮರಣ ಹೊಂದಿದರೆ ಅಹೋರಾತ್ರಿ ಭಜನೆ ಮಾಡಿ, ಮುಂಜಾನೆ ಮೆರವಣಿಗೆ ಮೂಲಕ ಅಂತ್ಯಸಂಸ್ಕಾರ ಮಾಡುವುದುಂಟು. ಆದರೆ ಇಲ್ಲಿಯ ಮಾರುತಿ ನಗರದಲ್ಲಿ ಕೋತಿಯೊಂದು ಸಂಜೆ ವೇಳೆ ಸಾವನ್ನಪ್ಪಿದ್ದು, ಮನುಷ್ಯರಂತೆಯೇ ವಿಧಿ-ವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಇಲ್ಲಿಯ ಮಾರುತಿ ನಗರದ ಆಂಜನೇಯ ಭಜನಾ ಸಂಘದ ಕಾರ್ಯಕರ್ತರೇ ಈ ಎಲ್ಲ ವಿಧಿ-ವಿಧಾನಗಳನ್ನು ನೆರವೇರಿಸಿ ಸಾವನ್ನಪ್ಪಿದ ಕೋತಿಯ ಅಂತ್ಯಕ್ರಿಯೆ ಮಾಡಿದ್ದಾರೆ. ಆಂಜನೇಯ ದೇವಾಸ್ಥಾನದ ಹತ್ತಿರ ಶುಕ್ರವಾರ ಸಂಜೆ 7ರ ಹೊತ್ತಿಗೆ ಕೋತಿಯೊಂದು ಆಕಸ್ಮಿಕವಾಗಿ ಸಾವನಪ್ಪಿತ್ತು. ಭಜನಾ ಸಂಘದ ಕಾರ್ಯಕರ್ತರು ದೇವಸ್ಥಾನ ಹತ್ತಿರ ಕುರ್ಚಿಯಲ್ಲಿ ಕುಳ್ಳಿರಿಸಿ, ವಿಧಿ-ವಿಧಾನಗಳೊಂದಿಗೆ ಪೂಜೆ ಸಲ್ಲಿಸಿದರು. ಅಹೋರಾತ್ರಿ ಭಜನಾ ಪದಗಳನ್ನು ಹಾಡುತ್ತಾ ಜಾಗರಣೆಯನ್ನೂ ನಡೆಸಿದರು.

ಶನಿವಾರ ಮುಂಜಾನೆ 7ಕ್ಕೆ ಮೆರವಣಿಗೆ ಮೂಲಕ ಪಕ್ಕದ ಜಮೀನಿನಲ್ಲಿ ಧಾರ್ಮಿಕ ವಿಧಿ-ವಿದಾನಗಳೊಂದಿಗೆ ಅಂತ್ಯ ಸಂಸ್ಕಾರ ನೆರವೇರಿಸಿ, ಮೃತ ಕೋತಿಯ ಆತ್ಮಕ್ಕೆ ಶಾಂತಿ ಕೋರಲಾಯಿತು ಎಂದು ಭಜನಾ ಸಂಘದ ಹಿರಿಯರು, ಗ್ರಾ ಪಂ ಸದಸ್ಯರಾದ ಲಕ್ಷ್ಮಣ ಗುಡಸಲಮನಿ, ಶಿವಪ್ಪ ಬಳಿಗೇರ ತಿಳಿಸಿದ್ದಾರೆ.

# ಸಂಗೊಳ್ಳಿ ರಾಯಣ್ಣ ಜಯಂತಿಯ ಅಂಗವಾಗಿ ರಕ್ತದಾನ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು. ರಕ್ತದಾನ ಶ್ರೇಷ್ಠ ದಾನವಾಗಿದೆ ಎಂದು ತಾಲೂಕಾ ಕುರುಬ ಸಮಾಜದ ಅಧ್ಯಕ್ಷ ಶೇಖಣ್ಣ ಕಾಳೆ, ಮುಖಂಡರಾದ ತಿಪಣ್ಣ ಸಂಶಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಜಿಲ್ಲಾ ಹಾಗೂ ತಾಲೂಕು ಘಟಕದಿಂದ 77ನೇ ಸ್ವಾತಂತ್ರ ದಿನಾಚರಣೆ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ 227ನೇ ಜಯಂತ್ಯುತ್ಸವ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರವನ್ನುದ್ದೇಶಿಸಿ ಮಾತನಾಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ 227ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿರುವ ಈ ಕಾರ್ಯ ಶ್ಲಾಘನೀಯ. ಯುವಕರು ರಾಯಣ್ಣರ ಆದರ್ಶಗಳನ್ನು ಬೆಳೆಸಿಕೊಳ್ಳಬೇಕು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಇಂತಹ ವಿಶಿಷ್ಠ ಕಾರ್ಯಕ್ರಮ ಹಮ್ಮಿಕೊಂಡಿರುವದು ಸ್ತುತ್ಯಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಸಹಯೋಗದಲ್ಲಿ ರಕ್ತದಾನ ಶಿಬಿರ ನಡೆಯಿತು. ಡಾ ಶ್ವೇತಾ ಪಾಟೀಲ ನೇತೃತ್ವ ವಹಿಸಿದ್ದರು. ಶಿಬಿರದಲ್ಲಿ ಯುವಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷ ಹನುಮಂತ ಶೇರಸೂರಿ, ತಾಲೂಕಾಧ್ಯಕ್ಷ ಹನಮಂತಪ್ಪ ಶೆರಸೂರಿ, ಮುಖಂಡರಾದ ನಿಂಗಪ್ಪ ಬನ್ನಿ, ಅಣ್ಣಪ್ಪ ರಾಮಗಿರಿ, ನಾಗರಾಜ ಮಡಿವಾಳರ, ಮಂಜುನಾಥ ಹೊಗೆಸೊಪ್ಪಿನ, ಶಿವಯೋಗಿ ಗಡ್ಡದೇವರಮಠ, ಮಂಜುನಾಥ ಶೇರಸೂರಿ, ಹರೀಶ ಲಕ್ಷ್ಮೇಶ್ವರ, ನಾರಾಯಣಸಾ ಪವಾರ, ಅಮರಪ್ಪ ಗುಡಗುಂಟಿ, ರಮೇಶ ಲಮಾಣಿ ಸಂತೋಷ ರಾಠೋಡ, ಪ್ರಕಾಶ ಗೌಡ ನಾಯ್ಕರ, ಮಾಂತೇಶ ಗದ್ದಿ, ರೋಹನ್ ಕಡ್ಡಿಪೂಜಾರ, ಚೇತನ ಹೊಳಲಾಪುರ, ಕಾರ್ಯಕರ್ತರು ಇದ್ದರು.

# ಚುನಾವಣೆ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿತರಿಗೆ ಶಿಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಯ ಯಳವತ್ತಿ ಗ್ರಾಮದಲ್ಲಿ ಚುನಾವಣೆಯ ಕರ್ತವ್ಯದಲ್ಲಿದ್ದ ಅಧಿಕಾರಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದ 14 ಜನ ಆರೋಪಿತರಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

2015ರ ಮೇ 29ರಂದು ಸಂಜೆ 5 ಗಂಟೆಗೆ ಬೂತ್ ನಂ.100ಕ್ಕೆ ಆರೋಪಿ ಚನ್ನಪ್ಪಗೌಡ ನಿಂಗನಗೌಡರ ಪದೇ ಪದೇ ಬಂದು ಹೋಗುತ್ತಿದ್ದಾಗ, ಕರ್ತವ್ಯದಲ್ಲಿದ್ದ ಅಧಿಕಾರಿಯು, ನಿಮ್ಮ ವರ್ತನೆಯಿಂದ ಬೇರೆಯವರಿಗೆ ತೊಂದರೆಯಾಗುತ್ತದೆ ಎಂದು ತಿಳಿಸಿದಾಗ, ಆರೋಪಿಯು ಇನ್ನುಳಿದ 13 ಆರೋಪಿತರೊಂದಿಗೆ ಕೂಡಿಬಂದು, ಅವಾಚ್ಯವಾಗಿ ಬೈದು, ಫಿರ್ಯಾದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಲ್ಲದೆ, ತಕರಾರು ಬಿಡಿಸಲು ಬಂದ ವ್ಯಕ್ತಿಗೂ ಕಲ್ಲು ಎಸೆದು ಗಾಯಗೊಳಿಸಿದ ಅಪರಾಧದ ಕುರಿತು ಗದಗ ವಿಭಾಗದ ಪೊಲೀಸ್ ಉಪಾಧೀಕ್ಷಕ ಎಂ.ವಿ ನಾಗನೂರ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್ ಶೆಟ್ಟಿ, ಪ್ರಕರಣದಲ್ಲಿ ಆರೋಪ ಸಾಬೀತಾಗಿದ್ದರಿಂದ 1ನೇ ಆರೋಪಿ ಚನ್ನಪ್ಪಗೌಡ ನಿಂಗನಗೌಡರ ಸೇರಿದಂತೆ ಉಳಿದ 13 ಆರೋಪಿಗಳಿಗೆ ಆಗಸ್ಟ್ 7ರಂದು ಕಲಂ 143ರ ಅಡಿಯಲ್ಲಿ 6 ತಿಂಗಳ ಸಾದಾ ಸಜೆ, 500 ರೂ ದಂಡ, 147ರಡಿ 1 ವರ್ಷ ಸಾದಾ ಶಿಕ್ಷೆ, 500 ರೂ. ದಂಡ, 148ರ ಅಡಿಯಲ್ಲಿ 1 ವರ್ಷ ಸಾದಾ ಸಜೆ, 500 ರೂ ದಂಡ, ಕಲಂ 323ರಡಿ 1 ವರ್ಷ ಜೈಲು, 500 ರೂ ದಂಡ, ಕಲಂ 324ರಡಿ 1 ವರ್ಷ ಜೈಲು, 500 ರೂ ದಂಡ, ಕಲಂ 353ರಡಿಯಲ್ಲಿ 1 ವರ್ಷ ಜೈಲು ಹಾಗೂ 5 ಸಾವಿರ ರೂ ದಂಡ, ಕಲಂ 504ರಡಿಯಲ್ಲಿ 1 ವರ್ಷ ಸಜೆ, 1 ಸಾವಿರ ರೂ ದಂಡ, ಕಲಂ 506ರಲ್ಲಿ 1 ವರ್ಷ ಸಜೆ, 1 ಸಾವಿರ ರೂ ದಂಡ, ಕಲಂ 3(1) (ಫಿ) ಪ.ಜಾ/ಪ.ಪಂ ಕಾಯ್ದೆಯಡಿ 1 ವರ್ಷ ಸಾದಾ ಶಿಕ್ಷೆ ಹಾಗೂ 1 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಅಭಿಯೋಜಕ ಮಲ್ಲಿಕಾರ್ಜುನಗೌಡ ಬಸವನಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

# 9ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ನಾಳೆಯಿಂದ ಮೂರು ದಿನಗಳ ಕಾಲ ರಾಜಸ್ಥಾನದ ಉದಯಪುರದಲ್ಲಿ 9ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನ ಜರುಗಳಿದೆ. ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದು, ಭಾನುವಾರ ಉದಯಪುರಕ್ಕೆ ಪ್ರಯಾಣ ಬೆಳಸಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ದೇಶದ ಎಲ್ಲಾ ರಾಜ್ಯಗಳ ವಿಧಾನ ಸಭೆಯ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿ ಹಾಗೂ ಉಪಸಭಾಪತಿಗಳು ಭಾಗವಹಿಸಲಿದ್ದಾರೆ. ಸೋಮವಾರ ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹ್ಲೋಟ್, ರಾಜ್ಯಸಭೆಯ ಉಪಸಭಾಪತಿ ಹರಿವಂಶ, ರಾಜಸ್ಥಾನದ ವಿಧಾನಸಭಾಧ್ಯಕ್ಷ ಸಿ.ಪಿ ಜೋಷಿ ಸೇರಿದಂತೆ ರಾಜಸ್ಥಾನದ ಶಾಸಕರು, ಸಂಸದರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

'ಇಂದಿನ ಡಿಜಿಟಲ್ ಯುಗದಲ್ಲಿ ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಅತ್ಯುತ್ತಮ ಆಡಳಿತ' ವಿಷಯವಾಗಿ ಸಮ್ಮೇಳನ ನಡೆಯಲಿದ್ದು, ಬಸವರಾಜ ಹೊರಟ್ಟಿರವರು 'ಪ್ರಜಾಪ್ರಭುತ್ವ ಸಂಸ್ಥೆಗಳ ಮೂಲಕ ರಾಷ್ಟ್ರವನ್ನು ಸಧೃಡಗೊಳಿಸುವಲ್ಲಿ ಜನಪ್ರತಿನಿಧಿಗಳ ಪಾತ್ರ' ಎಂಬ ವಿಷಯದ ಕುರಿತು ವಿಚಾರ ಮಂಡಿಸಲಿದ್ದಾರೆ.

ಮಂಗಳವಾರ ನಡೆಯುವ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್, ರಾಜಸ್ಥಾನದ ರಾಜ್ಯಪಾಲರಾದ ಕಲರಾಜ್ ಮಿಶ್ರಾ ಮತ್ತಿತ್ತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka